ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

1974 50 2023

ಶನಿವಾರ, ನವೆಂಬರ್ 04, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 173 RNI : 27369/75

janathavani@mac.com
www.janathavani.com
☎ 08192 254736 91642 99999

## ಶಾಲೆಗಳಲ್ಲಿ ಕನ್ನಡ ಕಡ್ಡಾಯಗೊಳಿಸಲಿ

### ಸಿರಿಗೆರೆ: ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ತರಳಬಾಳು ಶ್ರೀ ಆಗ್ರಹ



ಸಿರಿಗೆರೆ, ನ. 3- ಕರ್ನಾಟಕ ರಾಜ್ಯವು ಭಾಷಾವಾರು ಪ್ರಾಂತ್ಯಗಳ ಮೇಲೆ ರಚನೆಯಾಗಿದೆ. ಹಾಗಾಗಿ ಕನ್ನಡಿಗರಾದ ನಾವುಗಳು ಕನ್ನಡವನ್ನು ಹೆಚ್ಚಾಗಿ ಬಳಸ ಬೇಕು. ಕರ್ನಾಟಕದ ಶಾಲೆಗಳಲ್ಲಿ ಕನ್ನಡ ವನ್ನು ಕಡ್ಡಾಯಗೊಳಿಸಬೇಕು. ಜೊತೆಗೆ ಎಲ್ಲರೂ ಕಡ್ಡಾಯವಾಗಿ ಕನ್ನಡವನ್ನು ಕಲಿಯಬೇಕು ಎಂದು ತರಳಬಾಳು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಸಿರಿಗೆರೆಯ ಶ್ರೀ ಗುರುಶಾಂತೇಶ್ವರ ದಾಸೋಹ ಮಂಟಪದಲ್ಲಿ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ ಮತ್ತು ಬೆಂಗಳೂರು ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಶುಕ್ರವಾರ ಜರುಗಿದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ನಾವುಗಳು ಕನ್ನಡ ನಾಡು, ನುಡಿಯ ಬಗ್ಗೆ ನಿರಂತರ ಅಭಿಮಾನ ಬೆಳೆಸಿಕೊಂಡಾಗ ಮಾತ್ರ ರಾಜ್ಯವು ಅಭಿವೃದ್ಧಿ ಪಥದತ್ತ ಸಾಗುತ್ತದೆ. ಎಲ್ಲ ವಿದ್ಯಾರ್ಥಿಗಳು ಕವಿಗಳ, ಸಾಹಿತಿಗಳ ಪ್ರೇರಣೆ ಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಹಾಗೂ ಕಲಿಕೆಯ ಮನೋಭಾವವನ್ನು ಬೆಳೆಸಿಕೊಳ್ಳ ಬೇಕು. ನಮ್ಮ ರಾಜ್ಯದ ಜಾನಪದ ಕಲಾ, ಸಂಸ್ಕೃತಿ ಗಳನ್ನು ಮುಂದಿನ ತಲೆಮಾರುಗಳಿಗೆ ಕೊಂಡೊಯ್ಯಬೇಕು ಎಂದು ಹೇಳಿದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕವಿ ಮೂಡ್ನಾಕೂಡು ಚಿನ್ನಸ್ವಾಮಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಅಧ್ಯಯನ ಕೇಂದ್ರಕ್ಕೆ ಹಣಕಾಸಿನ ಕೊರತೆ ಯಿಂದ ಸೊರಗುತ್ತಿದೆ. ಬಸವಣ್ಣ ಕರ್ನಾಟಕಕ್ಕೆ ಮಾತ್ರ ಸೀಮಿತವಲ್ಲ. (4ನೇ ಪುಟಕ್ಕೆ)

## ಬರ: ಸಮಸ್ಯೆಗಳಿಗೆ ಮುನ್ನವೇ ಸಿದ್ಧರಾಗಿ

### ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಗೆ ಕಂದಾಯ ಸಚಿವ ಕೃಷ್ಣ ಭೈರೇಗೌಡ ಸೂಚನೆ




ದಾವಣಗೆರೆ, ನ.3- ಮಳೆ ಕೈ ಕೊಟ್ಟ ಪರಿಣಾಮ ಉಂಟಾಗಬಹುದಾದ ಬರ ಸಮಸ್ಯೆಗಳಿಗೆ ಮೊದಲೇ ಸಿದ್ಧರಾಗುವಂತೆ ಅಧಿಕಾರಿಗಳಿಗೆ ಕಂದಾಯ ಸಚಿವ ಕೃಷ್ಣ ಭೈರೇಗೌಡ ಸೂಚಿಸಿದರು.

ಜಿಲ್ಲಾ ಪಂಚಾಯ್ತಿ ಸಭಾಂಗಣದಲ್ಲಿ ಶುಕ್ರವಾರ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಸಮಸ್ಯೆ ಬಂದ ನಂತರ ಪರಿಹಾರಕ್ಕೆ ಮುಂದಾಗುವುದಕ್ಕಿಂತ ಮುನ್ನೆಚ್ಚರಿಕೆ ಕ್ರಮ ಕೈಗೊಂಡು ಜನರಿಗೆ ನೆರವಾಗಬೇಕು ಎಂದರು.

ಬರ ಪರಿಹಾರ ನೀಡವಂತೆ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದೇವೆ. (2ನೇ ಪುಟಕ್ಕೆ)

**ಜಿಲ್ಲೆಗೆ 100 ಭೂ ಮಾಪಕರು**

**ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಜಿಲ್ಲೆಯಲ್ಲಿ ಸರ್ವೇಯರ್ ಕೊರತೆ ಇದೆ ಎಂದು ಸಭೆಯಲ್ಲಿ ಪ್ರಸ್ತಾಪಿಸಿದಾಗ, ಜನವರಿ ವೇಳೆಗೆ 100 ಪರವಾನಗಿ ಭೂ ಮಾಪಕರನ್ನು ನೀಡಲಾಗುತ್ತದೆ. ಇದರಿಂದ ಕಂದಾಯ ಗ್ರಾಮ ರಚನೆ, ಪೋಡಿ ಮುಕ್ತ ಗ್ರಾಮ ಆಂದೋಲನ ಮಾಡಲು ಸಹಕಾರಿಯಾಗುತ್ತದೆ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ಹೇಳಿದರು.**

### ಫ್ರೂಟ್ ತಂತ್ರಾಶದಲ್ಲಿ ನೋಂದಾಯಿಸಿದ ಜಮೀನಿಗೆ ಮಾತ್ರ ಪರಿಹಾರ

ರೈತರು ಫ್ರೂಟ್ಸ್ ತಂತ್ರಾಂಶದಲ್ಲಿ ಎಷ್ಟು ಜಮೀನು ವಿಸ್ತೀರ್ಣವನ್ನು ನೋಂದಾಯಿಸಿರುತ್ತಾರೋ ಅಷ್ಟಕ್ಕೆ ಮಾತ್ರ ಬೆಳೆ ಪರಿಹಾರ ನೀಡಲಾಗುತ್ತದೆ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ಹೇಳಿದರು.

ಸಣ್ಣ ಹಾಗೂ ಅತಿಸಣ್ಣ ರೈತರಿಗೆ ಸಿಗುವ ಸೌಲಭ್ಯ ಪಡೆಯುವ ಉದ್ದೇಶದಿಂದ ದೊಡ್ಡ ಹಿಡುವಳಿ ಇರುವವರು ಕಡಿಮೆ ವಿಸ್ತೀರ್ಣದ ಜಮೀನನ್ನು ಮಾತ್ರ ಫ್ರೂಟ್ಸ್‌ಗೆ ನೋಂದಣಿ ಮಾಡುತ್ತಿರುವುದರಿಂದ ಅನೇಕ ಜಮೀನುಗಳು ಫ್ರೂಟ್ಸ್ ಮಾಹಿತಿಯಿಂದ ಹೊರಗುಳಿದಿವೆ ಎಂದು ಜಂಟಿ ನಿರ್ದೇಶಕ ಶ್ರೀನಿವಾಸ್ ಚಿಂತಾಲ್ ಸಭೆಯ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಫ್ರೂಟ್ಸ್ (2ನೇ ಪುಟಕ್ಕೆ)

## ಎಸ್.ಕೆ. ಬಸವರಾಜನ್, ಸೌಭಾಗ್ಯ ದಂಪತಿ ವಿರುದ್ಧದ ಮೊಕದ್ದಮೆ ರದ್ದು

ಬೆಂಗಳೂರು, ನ.3- ಚಿತ್ರದುರ್ಗ ಮಾಜಿ ಶಾಸಕ ಎಸ್.ಕೆ. ಬಸವರಾಜನ್ ಮತ್ತು ಚಿತ್ರದುರ್ಗ ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷರಾದ ಶ್ರೀಮತಿ ಸೌಭಾಗ್ಯ ಬಸವರಾಜನ್ ದಂಪತಿ ವಿರುದ್ಧ ನ್ಯಾಯಾಲಯದಲ್ಲಿ ದಾಖಲಾಗಿದ್ದ ಮೊಕದ್ದಮೆಯನ್ನು ರಾಜ್ಯ ಉಚ್ಚ ನ್ಯಾಯಾಲಯ ರದ್ದುಪಡಿಸಿದೆ.

ಚಿತ್ರದುರ್ಗ ಬೃಹನ್ಮಠದ ಶ್ರೀ ಶಿವ ಮೂರ್ತಿ ಮುರುಘಾ ಶರಣರ ಪ್ರಕರಣದ ಹಿನ್ನೆಲೆಯಲ್ಲಿ ಶ್ರೀ ಬಸವ ಪ್ರಭು ಸ್ವಾಮೀಜಿ ಹೂಡಿದ್ದ ಮೊಕದ್ದಮೆಯನ್ವಯ ಬಸವ ರಾಜನ್ ಮತ್ತು ಸೌಭಾಗ್ಯ ದಂಪತಿ ಬಂಧನ ಕ್ಕೊಳಗಾಗಿ ಜಾಮೀನಿನ ಮೇಲೆ ಬಿಡುಗಡೆ ಯಾಗಿದ್ದನ್ನು ಇಲ್ಲಿ ಸ್ಮರಿಸಬಹುದು.



**ಶ್ರೀ ಶಿವಮೂರ್ತಿ ಮುರುಘಾ ಶರಣರ ಪ್ರಕರಣದ ಹಿನ್ನೆಲೆ**

ಶ್ರೀ ಶಿವಮೂರ್ತಿ ಮುರುಘಾ ಶರಣರ ಬಂಧನದ ಪ್ರಕರಣದಲ್ಲಿ ಬಸವ ರಾಜನ್ ಮತ್ತು ಸೌಭಾಗ್ಯ ದಂಪತಿಯ ಚಿತಾವಣೆ ಇದ್ದು, ಇವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಕೇಳಿಕೊಂಡು ಶ್ರೀ ಬಸವಪ್ರಭು ಸ್ವಾಮೀಜಿ ಚಿತ್ರದುರ್ಗ ಜಿಲ್ಲಾ ನ್ಯಾಯಾಲಯದಲ್ಲಿ (2ನೇ ಪುಟಕ್ಕೆ)

## ಕಾಂತರಾಜ್ ವರದಿಗೆ ಬಿಜೆಪಿ ವಿರೋಧ

**ಜಾತಿ ಸಂಘರ್ಷಕ್ಕೆ ಆಸ್ಪದ ಬೇಡ ಎಂದು ಎಚ್ಚರಿಕೆ**

ಬೆಂಗಳೂರು, ನ. 3 - ಕಾಂತರಾಜ್ ವರದಿಯನ್ನು ಮುಂದಿಟ್ಟುಕೊಂಡು ಕರ್ನಾಟಕ ದಲ್ಲಿನ ಕಾಂಗ್ರೆಸ್ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಬಿಜೆಪಿ ವರಿಷ್ಠರು ತಂತ್ರ ರೂಪಿಸಿದ್ದಾರೆ.

ಹಿಂದುಳಿದ ವರ್ಗಗಳ ಆಯೋಗದ ವರದಿಗೆ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಬೆಂಬಲ ಸೂಚಿಸಿರುವ ಬೆನ್ನಲ್ಲೇ ಬಿಜೆಪಿ ಇಂತಹ ವರದಿಗಳಿಗೆ ವಿರೋಧ ವ್ಯಕ್ತಪಡಿಸಿದೆ.

ಮುಂಬರುವ ಲೋಕಸಭಾ ಚುನಾವಣೆಗೂ ಮುನ್ನ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಸಮೀಕ್ಷಾ ವರದಿ (ಕಾಂತರಾಜ್ ವರದಿ) ಸ್ವೀಕರಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.

ಇದರ ಬೆನ್ನಲ್ಲೇ ಕಾಂತರಾಜ್ ವರದಿಯ ಪರ ಮತ್ತು ವಿರೋಧದ ಚರ್ಚೆ ತಾರಕಕ್ಕೇರಿದ್ದು, ಈ ವಿಚಾರ ಆಡಳಿತ ಮತ್ತು ಪ್ರತಿಪಕ್ಷಗಳ ನಡುವೆ ರಾಜಕೀಯ ಸಂಘರ್ಷಕ್ಕೆ ಅಸ್ತ್ರವಾಗಿದೆ.

ಮುಖ್ಯಮಂತ್ರಿ ನಿರ್ಧಾರ ಅವರಿಗೇ ಮುಳುವಾಗಿಸಲು ಬಿಜೆಪಿ ನಿನ್ನೆ ದೆಹಲಿಯಲ್ಲಿ ಕಾರ್ಯತಂತ್ರ ರೂಪಿಸಿದೆ. ಕರ್ನಾಟಕದ ಹಿಂದುಳಿದ ವರ್ಗಕ್ಕೆ ಸೇರಿದ ಕೆ.ಎಸ್. ಈಶ್ವರಪ್ಪ ಸೇರಿದಂತೆ ಬಿಜೆಪಿಯ ಪ್ರಮುಖರನ್ನು ನಿನ್ನೆ ದೆಹಲಿಗೆ (4ನೇ ಪುಟಕ್ಕೆ)

## ತಕ್ಷಣವೇ ಮಹಿಳಾ ಮೀಸಲು ಜಾರಿ ಆದೇಶ ಕಠಿಣ: ಸುಪ್ರೀಂ

ನವದೆಹಲಿ, ನ. 3- ಮಹಿಳಾ ಮೀಸಲಾತಿ ಮಸೂದೆಯು ಜನ ಗಣತಿ ನಂತರವೇ ಜಾರಿಯಾಗಲಿದೆ ಎಂಬ ಅಂಶ ತೆಗೆದು ಹಾಕುವುದು ಅತ್ಯಂತ ಕಠಿಣವಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಕಾಂಗ್ರೆಸ್ ನಾಯಕಿ ಜಯಾ ಠಾಕೂರ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿ, ಮಹಿಳಾ ಮೀಸಲಾತಿ ಕಾಯ್ದೆಯನ್ನು ತಕ್ಷಣವೇ ಜಾರಿಗೆ ತರಬೇಕು ಎಂದು ಕೋರಿದ್ದರು.

ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಎಸ್.ವಿ.ಎನ್. ಭಟ್ಟಿ ಅವರನ್ನು ಒಳಗೊಂಡ ಪೀಠ, ಮೀಸಲಾತಿ ಬಗ್ಗೆ ಹಲವು ಅರ್ಜಿಗಳು ಬಾಕಿ ಇವೆ. ಈ ಅರ್ಜಿಯನ್ನೂ ಅದರ ಜೊತೆ (4ನೇ ಪುಟಕ್ಕೆ)

**ಯರಗುಂಟೆ ಮಂಜಣ್ಣ (ಸೊಸೈಟಿ ಮಂಜಣ್ಣ) ನಿಧನ**



ಜನನ 14.06.1945


ನಿಧನ 03.11.2023

ದಾವಣಗೆರೆ ಸಿಟಿ ಆಂಜನೇಯ ಬಡಾವಣೆ, 4ನೇ ಅಡ್ಡ ರಸ್ತೆ,
ಬಸವೇಶ್ವರ ಪಾರ್ಕ್ ಎದುರು ನಿವಾಸಿ
ಖ್ಯಾತ ಅಕ್ಕಿ ವರ್ತಕರಾದ
**ಶ್ರೀ ಯರಗುಂಟೆ ಮಂಜಣ್ಣ (ಸೊಸೈಟಿ ಮಂಜಣ್ಣ)**
ಇವರು ದಿನಾಂಕ : 03.11.2023ರ ಶುಕ್ರವಾರ ಸಂಜೆ 7.46 ಕ್ಕೆ ತೀವ್ರ ಹೃದಯಾಘಾತದಿಂದ ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಯಲ್ಲಿ ನಿಧನರಾದರು.
ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯ, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ
ಮೃತರ ಪಾರ್ಥಿವ ಶರೀರವನ್ನು ಸ್ವಗೃಹದಲ್ಲಿ ದಿನಾಂಕ : 04.11.2023ರ ಶನಿವಾರ ಬೆಳಿಗ್ಗೆ 7.30ರಿಂದ ಅಂತಿಮ ದರ್ಶನಕ್ಕೆ ಇಡಲಾಗುವುದು.
ನಂತರ ಅಂತ್ಯಕ್ರಿಯೆಯನ್ನು ಸಂಜೆ 3.30ಕ್ಕೆ ನಗರದ ಗ್ಲಾಸ್ ಹೌಸ್ ಹತ್ತಿರವಿರುವ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.
ದುಃಖತಪ್ತರು :
**ಲಲಿತಮ್ಮ ಮತ್ತು ಮಕ್ಕಳು ಹಾಗೂ ಕುಟುಂಬದವರು.**
ಮೊ : 94482 74343, 98440 54343




ಮುಂಗಡ ಬುಕ್ಕಿಂಗ್ ಯೋಜನೆ
ಧಂತೇರಾಸ್‌ಗಾಗಿ ಮುಂಗಡ ಬುಕ್ಕಿಂಗ್ ಯೋಜನೆಯೊಂದಿಗೆ, ಕನಿಷ್ಠ 10% ಪಾವತಿಸಿ ಮತ್ತು ಬುಕ್ ಮಾಡಿದ ದರದಲ್ಲಿ ಅಥವಾ ಚಾಲ್ತಿಯಲ್ಲಿರುವ ದರದಲ್ಲಿ ಆಭರಣವನ್ನು ಪಡೆಯಿರಿ, ಯಾವುದು ಕಡಿಮೆಯೋ ಅದು.
30% ರವರೆಗೆ ರಿಯಾಯ್ತಿ ವಜ್ರದ ಮೌಲ್ಯಕ್ಕೆ
30% ರವರೆಗೆ ರಿಯಾಯ್ತಿ ಜೆಮ್‌ಸ್ಟೋನ್ ಮತ್ತು ಪೋಲ್ಕಿ ಆಭರಣಗಳ ಮೇಕಿಂಗ್ ಚಾರ್ಜ್ ಮೇಲೆ
100 MG ಚಿನ್ನದ ನಾಣ್ಯ ಪ್ರತಿ 30,000 ರೂಪಾಯಿಗಳ ಮೌಲ್ಯದ ಚಿನ್ನಾಭರಣ ಖರೀದಿ ಮೇಲೆ
ಈ ಕೊಡುಗೆ 19 ನವೆಂಬರ್‌ವರೆಗೆ
*Conditions apply
ನಿಮ್ಮ ಹಳೆಯ ಮಲಬಾರ್ ವಜ್ರಾಭರಣಗಳನ್ನು ಹೊಸ ಚಿನ್ನ ಅಥವಾ ವಜ್ರಾಭರಣಗಳಿಗೆ ವಿನಿಮಯ ಮಾಡಿಕೊಳ್ಳಿ ಮತ್ತು ಶೇಕಡ 100% ರಷ್ಟು ವಿನಿಮಯ ಮೌಲ್ಯ ಪಡೆಯಿರಿ.
5% CASHBACK# SBI card
#Min. Trxn.: ₹25,000; Max. Cashback: ₹2,500 per card account.
Validity: 04 Nov - 12 Nov 2023. T&C Apply.
ದಾವಣಗೆರೆ, ಮಂಡಿಪೇಟೆ. ದೂ: 08192 231916, 7994435487
BUY ONLINE AT: malabargoldanddiamonds.com OVER 330 STORES ACROSS 11 COUNTRIES

# ಬೆಟ್ಟಿಂಗ್ ಕಂಪನಿಯಿಂದ ಮುಖ್ಯಮಂತ್ರಿ ಬಾಘೇಲ್‌ಗೆ 508 ಕೋಟಿ : ಜಾರಿ ನಿರ್ದೇಶನಾಲಯದ ಆರೋಪ



ನವದೆಹಲಿ, ನ. 3 – ಆನ್‌ಲೈನ್ ಬೆಟ್ಟಿಂಗ್ ವೇದಿಕೆಯಾದ ಮಹದೇವ್ ಆಪ್ ಪ್ರವರ್ತಕರು ಛತ್ತೀಸ್‌ಘಡದ ಮುಖ್ಯಮಂತ್ರಿ ಭೂಪೇಶ್ ಬಾಘೇಲ್ ಅವರಿಗೆ 508 ಕೋಟಿ ರೂಗಳನ್ನು ನೀಡಿದ್ದಾರೆ. ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಜಾರಿ ನಿರ್ದೇಶನಾಲಯ ತಿಳಿಸಿದೆ.

ಈ ಪ್ರಕರಣದಲ್ಲಿ ಏಜೆಂಟ್ ಎನ್ನಲಾದ ಅಸಿಮ್ ದಾಸ್ ಎಂಬಾತನನ್ನು ಜಾರಿ ನಿರ್ದೇಶನಾಲಯ ರಾಯಪುರದಲ್ಲಿ ಬಂಧಿಸಿತ್ತು. ಆತನಿಂದ 5.39 ಕೋಟಿ ರೂ. ನಗದು ವಶಪಡಿಸಿಕೊಳ್ಳಲಾಗಿತ್ತು.

ಯು.ಎ.ಇ.ಯಲ್ಲಿರುವ ಆಪ್ ಪ್ರವರ್ತಕರು ಈ ಹಣವನ್ನು ಕಾಂಗ್ರೆಸ್ ಪಕ್ಷದ ಚುನಾವಣಾ ವೆಚ್ಚಕ್ಕೆಂದು ಕಳಿಸಿದ್ದರು ಎಂದು ಜಾರಿ ನಿರ್ದೇಶನಾಲಯ ಹೇಳಿದೆ.

ಮಹದೇವ್ ಆಪ್ ಪ್ರವರ್ತಕರು ಮುಂಬರುವ ಚುನಾವಣೆಯ ಹಿನ್ನೆಲೆಯಲ್ಲಿ 'ಬಾಘೇಲ್' ಎಂಬುವವರಿಗೆ ಹಣ ನೀಡಲು ತನ್ನನ್ನು ಕಳಿಸಿದ್ದರು ಎಂದು ಅಸಿಮ್ ದಾಸ್ ಹೇಳಿರುವುದಾಗಿ ಜಾರಿ ನಿರ್ದೇಶನಾಲಯ ತಿಳಿಸಿದೆ.

ದಾಸ್ ವಿಚಾರಣೆ ಹಾಗೂ ಆತನಿಂದ ವಶಪಡಿಸಿಕೊಳ್ಳಲಾದ ಫೋನ್ ಅನ್ನು ವಿಧಿ ವಿಜ್ಞಾನ ಪರಿಶೀಲನೆಗೆ ಒಳಪಡಿಸಿದಾಗ ಹೆಚ್ಚಿನ ಮಾಹಿತಿಗಳು ದೊರೆತಿವೆ. ಮಹದೇವ್ ನೆಟ್‌ವರ್ಕ್‌ನ ಉನ್ನತ ಅಧಿಕಾರಿಯಾದ ಶುಭಂ ಸೋನಿ ಕಳಿಸಿರುವ ಇ-ಮೇಲ್ ವಿವರಗಳು ದೊರೆತಿವೆ. ಮಹದೇವ್ ಆಪ್ ಪ್ರವರ್ತಕರಿಂದ ಮುಖ್ಯಮಂತ್ರಿ ಬಾಘೇಲ್ ಅವರಿಗೆ ಇದುವರೆಗು 508 ಕೋಟಿ ರೂ. ಪಾವತಿಯಾಗಿರುವುದು ಕಂಡು ಬಂದಿದೆ ಎಂದು ಜಾರಿ ನಿರ್ದೇಶನಾಲಯ ಹೇಳಿದೆ.

ಈ ಆರೋಪಗಳ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದೂ ಜಾರಿ ನಿರ್ದೇಶನಾಲಯ ತಿಳಿಸಿದೆ. ಆಪ್ ಮೂಲಕ ಪಡೆಯಲಾದ ಅಕ್ರಮ ಹಣವನ್ನು ರಾಜಕಾರಣಿಗಳು ಹಾಗೂ ಅಧಿಕಾರಿಗಳಿಗೆ ಲಂಚವಾಗಿ ನೀಡಲಾಗುತ್ತಿದೆ ಎಂದು ಜಾರಿ ನಿರ್ದೇಶನಾಲಯ ಈ ಹಿಂದೆ ತಿಳಿಸಿತ್ತು.

ಬಾಲಿವುಡ್ ನಟರೂ ಸೇರಿದಂತೆ ಹಲವರನ್ನು ಈ ಪ್ರಕರಣದಲ್ಲಿ ವಿಚಾರಣೆಗೆ ಒಳಪಡಿಸಲಾಗಿದೆ.

ಜಾರಿ ನಿರ್ದೇಶನಾಲಯವು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಪರವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಬಾಘೇಲ್ ಈ ಹಿಂದೆ ಆರೋಪಿಸಿದ್ದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮಹದೇವ್ ಆಪ್ ಬೇನಾಮಿ ಬ್ಯಾಂಕ್ ಖಾತೆಗಳಲ್ಲಿದ್ದ 15.59 ಕೋಟಿ ರೂ.ಗಳನ್ನು ಜಾರಿ ನಿರ್ದೇಶನಾಲಯ ವಶಪಡಿಸಿಕೊಂಡಿದೆ. ಭೀಮ್ ಯಾದವ್ ಎಂಬ ಪೊಲೀಸ್ ಪೇದೆಯನ್ನೂ ಬಂಧನಕ್ಕೆ ಒಳಪಡಿಸಲಾಗಿದೆ. ಅಕ್ರಮ ಹಣ ಸಾಗಣೆಯಲ್ಲಿ ಯಾದವ್ ಭಾಗಿಯಾಗಿದ್ದ ಎಂದು ಆರೋಪಿಸಲಾಗಿದೆ.

# ಬರ : ಸಮಸ್ಯೆಗಳಿಗೆ ಮುನ್ನವೇ ಸಿದ್ಧರಾಗಿ

(1ನೇ ಪುಟದಿಂದ) ನಿರಂತರವಾಗಿ ಕೇಂದ್ರದ ಸಂಪರ್ಕದಲ್ಲಿದ್ದೇವೆ. ಈಗಾಗಲೇ ನಾಲ್ಕು ಬಾರಿ ಬರ ಪರಿಹಾರ ಹಣ ಬಿಡುಗಡೆಗೆ ಮನವಿ ಮಾಡಿದ್ದೇವೆ. ದೇಶದ ಎರಡನೇ ಅತಿ ದೊಡ್ಡ ತೆರಿಗೆ ಸಂಗ್ರಹಿಸುವ ಕರ್ನಾಟಕದವರು. ಕೇಂದ್ರದಿಂದ ಬರ ಪರಿಹಾರದ ಹಣ ಬರುವ ಬಗ್ಗೆ ಆಶಾವಾದಿಗಳಾಗಿದ್ದೇವೆ ಎಂದರು.

ಜಿಲ್ಲೆಯ ಯಾವ ಗ್ರಾಮದಲ್ಲೂ ಕುಡಿಯುವ ನೀರಿನ ಅಭಾವ ತಲೆದೋರದಂತೆ ಎಚ್ಚರ ವಹಿಸಬೇಕು. ಪ್ರತಿ ತಹಶೀಲ್ದಾರ್ ಬಳಿ 3 ಕೋಟಿ ರೂ. ಹಾಗೂ ಜಿಲ್ಲಾಧಿಕಾರಿಗಳ ಬಳಿ 8 ಕೋಟಿ ರೂ. ಹಣವಿದೆ ಇದನ್ನು ಸಮರ್ಪಕವಾಗಿ ಬಳಕೆ ಮಾಡಿಕೊಳ್ಳಿ ಎಂದು ಹೇಳಿದರು.

ನೀರು ಪಡೆಯಲು 1042 ಖಾಸಗಿ ಬೋರ್‌ವೆಲ್‌ಗಳನ್ನು ಗುರುತಿಸಿರುವ ಅಂಕಿ ಅಂಶಗಳನ್ನು ತೋರಿಸಿದರೆ ಸಾಲದು, ಅವರಿಂದ ಒಪ್ಪಿಗೆಯನ್ನೂ ಪಡೆದಿರಬೇಕು. ಡಿಸೆಂಬರ್ ತಿಂಗಳಲ್ಲಿ ನೀರಿನ ಅಭಾವ ತಲೆದೋರುವ ಸಾಧ್ಯತೆ ಇದೆ. ಟ್ಯಾಂಕರ್ ನೀರು ಪೂರೈಕೆ ಬಗ್ಗೆ ಜನರಲ್ಲಿ ಅಸಮಾಧಾನ ಹಾಗೂ ದೂರುಗಳಿವೆ. ಈ ಹಿನ್ನೆಲೆಯಲ್ಲಿ ಖಾಸಗಿ ಬೋರ್‌ವೆಲ್ ನೀರು ಪೂರೈಕೆಗೆ ಆದ್ಯತೆ ನೀಡುವಂತೆ ಹೇಳಿದರು.

**ಬಗರ್‌ಹುಕ್ಕುಂ ಸಮಿತಿ ರಚನೆ:** ರಾಜ್ಯದಲ್ಲಿನ ಭೂ ರಹಿತ ಬಡವರಿಗೆ ಮುಂದಿನ ವರ್ಷದೊಳಗೆ ಹಕ್ಕುಪತ್ರಗಳನ್ನು ನೀಡಲು ಹತ್ತು ದಿನಗಳಲ್ಲಿ ಬಗರ್ ಹುಕ್ಕುಂ ಸಮಿತಿಗಳನ್ನು ರಚನೆ ಮಾಡಲಾಗುತ್ತಿದೆ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ತಿಳಿಸಿದರು.

ಜಿಲ್ಲೆಯಲ್ಲಿ ನಮೂನೆ 57 ರಲ್ಲಿ 37005, ಫಾರಂ 50 ರಡಿ 33256, ಫಾರಂ 53 ರಡಿ 36324 ಅರ್ಜಿಗಳು ಸ್ವೀಕೃತವಾಗಿದ್ದು, ಬಗರ್ ಹುಕ್ಕುಂ ರಡಿ 380 ಅರ್ಜಿಗಳು ಮಾತ್ರ ವಿಲೇವಾರಿಯಾಗಿವೆ. ಅರ್ಜಿಗಳನ್ನು ತ್ವರಿತಗತಿಯಲ್ಲಿ ಇತ್ಯರ್ಥ ಮಾಡಲು ಒಂದು ವಾರದಲ್ಲಿ ಬಗರ್ ಹುಕುಂ ಆಪ್ ಅಧಿಕಾರಿಗಳ ಕೈ ಸೇರಲಿದ್ದು ಎಲ್ಲಾ ಆನ್‌ಲೈನ್‌ನಲ್ಲಿ ಪರಿಶೀಲನೆ ಮಾಡಲು ಅವಕಾಶ ಕಲ್ಪಿಸಲಾಗುತ್ತದೆ ಎಂದು ಹೇಳಿದರು.

ಬಗರ್‌ಹುಕ್ಕುಂ ದುರ್ಬಳಕೆ ತಡೆಗಟ್ಟಲು ಮಂಜೂರಾತಿಗೆ ಡಿಜಿಟಲ್ ಸಹಿಗೆ ಅವಕಾಶ ಮಾಡಿಕೊಟ್ಟು ಡಿಜಿಟಲ್ ಸಾಗುವಳಿ ಚೀಟಿಯನ್ನು ನೀಡಲಾಗುತ್ತದೆ. ಈ ಹಿಂದೆ ನೀಡಿದ ಸಾಗುವಳಿ ಚೀಟಿ ನೀಡಿದ ನೈಜತೆಯ ಬಗ್ಗೆ ರಾಜ್ಯದಲ್ಲಿ ಲಕ್ಷಾಂತರ ಪ್ರಕರಣಗಳು ನ್ಯಾಯಾಲಯದಲ್ಲಿವೆ. ಮುಂದಿನ ದಿನಗಳಲ್ಲಿ ಈಗಾಗದಂತೆ ಡಿಜಿಟಲೀಕರಣ ಮಾಡಲಾಗುತ್ತಿದೆ ಎಂದರು.

## ಸರ್ಕಾರಿ ಭೂಮಿ ರಕ್ಷಣೆಗೆ ಬೀಟ್ ಪದ್ಧತಿ

ಸರ್ಕಾರಿ ಜಮೀನುಗಳ ರಕ್ಷಣೆಗಾಗಿ ಆಪ್ ಸಿದ್ದಪಡಿಸಲಾಗುತ್ತಿದ್ದು ವಾರದಲ್ಲಿ ಇದು ಅಸ್ತಿತ್ವಕ್ಕೆ ಬರಲಿದೆ. ಸರ್ಕಾರಿ ಜಮೀನುಗಳನ್ನು ಆಪ್ ಮೂಲಕ ಡಾಟಾಬೇಸನ್ನು ಸಿದ್ದಪಡಿಸಿ ಪ್ರತಿ ಮೂರು ತಿಂಗಳಿಗೊಮ್ಮೆ ಆ ಸ್ಥಳಕ್ಕೆ ಗ್ರಾಮಲೆಕ್ಕಗರು ಭೇಟಿ ನೀಡಿ ಭೂಮಿ ಒತ್ತುವರಿಯಾಗಿದೆಯೋ ಇಲ್ಲವೋ ಎಂಬುದನ್ನು ಆಪ್ ಮೂಲಕ ಆಯಾ ಸ್ಥಳದಿಂದಲೇ ದೃಢೀಕರಿಸಿ ಅಪ್‌ಲೋಡ್ ಮಾಡಬೇಕು. ಒಂದು ವೇಳೆ ಸರ್ಕಾರಿ ಜಮೀನು ಒತ್ತುವರಿಯಾಗಿದ್ದಲ್ಲಿ ಆನ್‌ಲೈನ್ ಮೂಲಕವೇ ತಹಶೀಲ್ದಾರರಿಗೆ ವರದಿ ನೀಡಬೇಕು. ಇದರಿಂದ ಸರ್ಕಾರಿ ಭೂ ಕಬಳಿಕೆ ತಪ್ಪಲಿದೆ ಎಂದು ಸಚಿವ ಕೃಷ್ಣ ಭೈರೇಗೌಡ ಹೇಳಿದರು.

## ವರ್ಷ ಮುಗಿದ ಮೇಲೆ ಬಿಲ್ ಕೊಡಬೇಡಿ

**ಸರ್ಕಾರದಿಂದ ಹಣ ಪಾವತಿ ವಿಳಂಬವಾಗು ತ್ತದೆಂದು ಎಂಬುದು ಖಾಸಗಿ ಕೊಳವೆಬಾವಿ ಯವರ ದೂರುತ್ತಾರೆ ಎಂದು ತಹಶೀಲ್ದಾರ್ ಅಶ್ವತ್ಥ್ ಹೇಳಿದಾಗ, ಬರಗಾಲ ಮುಗಿದು ವರ್ಷ ಆದ ಮೇಲೆ ಬಿಲ್ ಕೊಟ್ಟರೆ ಬಿಲ್ ಪಾಸ್ ಆಗುವುದಿಲ್ಲ. ತಹಸೀಲ್ದಾರರು, ತಾಪಂ ಇಓಗಳು ದೃಢೀಕರಿಸಿ ಕೂಡಲೇ ಬಿಲ್ ಸಲ್ಲಿ ಸುವ ವ್ಯವಸ್ಥೆ ಮಾಡಿದರೆ ವಿಳಂಬದ ಮಾತೇ ಇಲ್ಲ. ಸರ್ಕಾರ ತಹಸೀಲ್ದಾರರ ಖಾತೆಗಳಿಗೆ ಹಣ ಹಾಕಿರುವಾಗ ವಿಳಂಬ ವಿಲ್ಲದೇ ಹಣ ಕೊಡುವ ಜವಾಬ್ದಾರಿ ನಿಮ್ಮ ಮೇಲೆಯೇ ಇದೆ ಎಂದು ಸಚಿವ ಕೃಷ್ಣ ಭೈರೇಗೌಡ ಹೇಳಿದರು.**

## ಜಮೀನಿಗೆ ಮಾತ್ರ ಪರಿಹಾರ

(1ನೇ ಪುಟದಿಂದ) ತಂತ್ರಾಂಶದಲ್ಲಿ ಎಷ್ಟು ಜಮೀನಿನ ವಿಸ್ತೀರ್ಣ ತೋರಿಸಲಾಗಿರುತ್ತದೆಯೋ ಅಷ್ಟಕ್ಕೇ ಮಾತ್ರ ಪರಿಹಾರ ಸಿಗುತ್ತದೆ. ಆಗ ರೈತರು ತಮಗೆ ಕಡಿಮೆ ಪರಿಹಾರ ಸಿಕ್ಕಿತು ಎನ್ನಬಾರದು. ರೈತರು ಜಮೀನು ಅಳತೆ ಸೇರಿಸಲು ಇನ್ನೂ ಸಮಯವಿದೆ. ಈ ಹಿನ್ನೆಲೆಯಲ್ಲಿ ಆಂದೋಲನ ನಡೆಸಿ ರೈತರಲ್ಲಿ ಅರಿವು ಮೂಡಿಸುವಂತೆ ಹೇಳಿದರು.

**ಹೊಸ ಕಂದಾಯ ಗ್ರಾಮಗಳ ರಚನೆ ಪ್ರಗತಿ:** ಸರ್ಕಾರ 2017 ರಿಂದಲೇ ರಾಜ್ಯದಲ್ಲಿನ ತಾಂಡಾಗಳು, ಗೊಲ್ಲರ ಹಟ್ಟಿ, ಕುರುಬರ ಹಟ್ಟಿ ಇಂತಹ ಜನವಸತಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವ ಕಾನೂನನ್ನು ಜಾರಿಗೆ ತಂದಿದ್ದು, ಹೊಸ ಕಂದಾಯ ಗ್ರಾಮಗಳ ರಚನೆಯಲ್ಲಿ ಜಿಲ್ಲೆಯ ದಾವಣಗೆರೆ 22, ಹರಿಹರ 2, ಹೊನ್ನಾಳಿ 4, ಚನ್ನಗಿರಿ 29, ನ್ಯಾಮತಿ 4, ಜಗಳೂರು ತಾಲ್ಲೂಕಿನ 29 ಗ್ರಾಮಗಳನ್ನು ಒಳಗೊಂಡು ಒಟ್ಟು 84 ಗ್ರಾಮಗಳನ್ನು ಗುರುತಿಸಲಾಗಿದೆ. ಅದರಲ್ಲಿ 48 ಗ್ರಾಮಗಳನ್ನು ಈಗಾಗಲೇ ಕಂದಾಯ ಗ್ರಾಮಗಳೆಂದು ಅಂತಿಮವಾಗಿದ್ದು, 3703 ಹಕ್ಕು ಪತ್ರಗಳನ್ನು ವಿತರಿಸಲಾಗಿದ್ದು, ಉಳಿದ ಗ್ರಾಮಗಳಿಗೂ ಸಮೀಕ್ಷೆ ನಡೆಸಿ ಶೀಘ್ರವಾಗಿ ಹಕ್ಕುಪತ್ರ ವಿತರಿಸಬೇಕು ಎಂದು ಸೂಚಿಸಿದರು.

**ರಸ್ತೆ ತೆರವಿಗೆ ಜೆಸಿಬಿ:** ಯಾವುದೇ ನಕಾಶೆಯಲ್ಲಿನ ದಾರಿ, ರಸ್ತೆಯನ್ನು ಒತ್ತುವರಿ ಮಾಡುವಂತಿಲ್ಲ, ಒತ್ತುವರಿ ಮಾಡಿರುವುದು ಕಂಡು ಬಂದಲ್ಲಿ ತಹಶೀಲ್ದಾರರು ಸ್ವಯಂಪ್ರೇರಿತವಾಗಿ ಒತ್ತುವರಿ ತೆರವು ಮಾಡಿ ಸಾರ್ವಜನಿಕ ದಾರಿಗೆ ಅನುವು ಮಾಡಿಕೊಡಬೇಕು. ಅಗತ್ಯವಿದ್ದಲ್ಲಿ ಜೆಸಿಬಿ ಬಳಸಿ ಎರಡು ಕಡೆ ಟ್ರೆಂಚ್ ಒಡೆದು ದಾರಿ ಮಾಡಿಕೊಡಬೇಕು, ಈ ಹಣವನ್ನು ಲ್ಯಾಂಡ್ ಕಾರ್ಪೊರೇಷನ್ ಅನುದಾನದಲ್ಲಿ ಭರಿಸಲು ತಿಳಿಸಿದರು.

ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ಮಾತನಾಡಿ ಬಗರ್‌ಹುಕ್ಕುಂ ನಡಿ ಭೂ ಮಂಜೂರಾತಿ ಇದ್ದರೂ ದಾರಿ ಇಲ್ಲದ ಕಾರಣ ಕಂದನಕೋವಿ ರೈತ ಐದು ವರ್ಷದಿಂದ ಬೀಳು ಬಿಟ್ಟಿದ್ದಾನೆ ಎಂದಾಗ ಕೂಡಲೇ ಕ್ರಮ ಕೈಗೊಳ್ಳಲು ಸಚಿವರು ಸೂಚನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಶಾಸಕರಾದ ಬಿ.ದೇವೇಂದ್ರಪ್ಪ, ಕೆ.ಎಸ್.ಬಸವಂತಪ್ಪ, ಡಿ. ಜಿ.ಶಾಂತನಗೌಡ, ಕಂದಾಯ ಇಲಾಖೆ ಆಯುಕ್ತ ಪಿ.ಸುನೀಲ್ ಕುಮಾರ್, ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಇಟ್ನಾಳ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಕನ್ನಡ ರಾಜ್ಯೋತ್ಸವವನ್ನು ಶಿಕ್ಷಣ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಆಚರಿಸಬೇಕು



## ನೂತನ ವಿದ್ಯಾಸಂಸ್ಥೆಯ ಅಧ್ಯಕ್ಷ ಪರಶುರಾಮಗೌಡ

ದಾವಣಗೆರೆ, ನ.3- ಕನ್ನಡ ರಾಜ್ಯೋತ್ಸವವನ್ನು ಎಲ್ಲಾ ಶಿಕ್ಷಣ ಸಂಸ್ಥೆಗಳಲ್ಲಿ ಕಡ್ಡಾಯವಾಗಿ ಆಚರಿಸಬೇಕು. ಇದರಿಂದ ಮುಂದೆ ಶಿಕ್ಷಕರಾಗುವ ಪ್ರಶಿಕ್ಷಣಾರ್ಥಿಗಳು ತಾವು ಹೋಗುವ ಶಾಲೆಗಳಲ್ಲಿ ಇದೇ ತರಹ ಕಾರ್ಯಕ್ರಮವನ್ನು ನಡೆಸಿಕೊಡುತ್ತಾ, ಕನ್ನಡದ ಮಹತ್ವದ ಬಗ್ಗೆ ಮಕ್ಕಳಲ್ಲೂ ಕೂಡ ತಿಳುವಳಿಕೆ ಮೂಡಿಸಬೇಕು ಎಂದು ನೂತನ ವಿದ್ಯಾಸಂಸ್ಥೆ ಅಧ್ಯಕ್ಷ ಪರಶುರಾಮನಗೌಡ ಅವರು ಕರೆ ನೀಡಿದರು.

ನಗರದ ನೂತನ ಶಿಕ್ಷಣ ವಿದ್ಯಾಸಂಸ್ಥೆಯಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ಏರ್ಪಡಿಸಲಾಗಿದ್ದ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಾಯಕ ಆಡಳಿತಾಧಿಕಾರಿ ಡಾ. ಆನಂದ ಋಗ್ವೇದಿ ಮಾತನಾಡಿ, 'ಎಲ್ಲಾದರೂ ಇರು ಎಂತಾದರೂ ಇರು, ಎಂದೆಂದಿಗೂ ನೀ ಕನ್ನಡವಾಗಿರು' ಎನ್ನುವ ಮೂಲಕ ಕನ್ನಡವು ಅಡಿಯಿಂದ ಮುಡಿಯವರೆಗೂ ನಮ್ಮನ್ನು ಆವರಿಸಿದೆ. ಪ್ರತಿಯೊಬ್ಬ ಕನ್ನಡಿಗರು ಕನ್ನಡ ಭಾಷೆ, ಸಂಸ್ಕೃತಿಯನ್ನು ಗೌರವಿಸಬೇಕು. ಅಭಿವ್ಯಕ್ತಿಗೆ ಬೇಕು ಕನ್ನಡ, ವ್ಯಕ್ತಿಯ ವ್ಯಕ್ತಿತ್ವಕ್ಕೂ ಬೇಕು ಕನ್ನಡ, ಇದು ಮುಂದಿನ ಪೀಳಿಗೆಗೂ ಹಂಚಿಕೆಯಾಗಬೇಕು ಎಂದರು. ಪ್ರತಿಯೊಬ್ಬ ವಿದ್ಯಾರ್ಥಿಗಳು ತಂತ್ರಜ್ಞಾನದ ಅಳವಡಿಕೆಯಲ್ಲೂ ಕನ್ನಡಕ್ಕೆ ಹೆಚ್ಚಿನ ಸ್ಥಾನಮಾನವನ್ನು ಕೊಟ್ಟು, ಮುಂದಿನ ತಲೆಮಾರಿನವರೆಗೂ ಕನ್ನಡದ ಕಂಪು ಸೂಸುವ ಕೆಲಸ ಮಾಡಬೇಕು. ಕನ್ನಡದ ಮೂಲ ಗುಣ ಒಂದು ಪಾತ್ರೆಯಲ್ಲಿರುವ ನೀರಿನಂತೆ. ಅಂದರೆ ನೀರಿಗೆ ಎಲ್ಲವನ್ನೂ ಸ್ವೀಕರಿಸುವ ಗುಣವಿದ್ದಂತೆ ಕನ್ನಡಕ್ಕೂ ಎಲ್ಲವನ್ನೂ ಸ್ವೀಕರಿಸುವ ಗುಣವುಂಟು ಎಂದು ಕನ್ನಡದ ಮಹತ್ವವನ್ನು ಪ್ರಶಿಕ್ಷಣಾರ್ಥಿಗಳಿಗೆ ತಿಳಿಸಿಕೊಟ್ಟರು.

ನೂತನ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಕೆ.ಎಸ್. ದಿವಾಕರ ನಾಯ್ಕ್ ಉಪಸ್ಥಿತರಿದ್ದರು.

ಪ್ರಶಿಕ್ಷಣಾರ್ಥಿ ಕು. ಹೆಚ್. ಪಾರ್ವತಿ ಪ್ರಾರ್ಥಿಸಿದರು. ಕು. ಕೆ.ವನಜಾಕ್ಷಿ ಸ್ವಾಗತಿಸಿದರು. ಕು. ಎ.ವಿ.ಕವಿತಾ ಹಾಗೂ ಕು. ಎಲ್.ರೇಣುಕಾ ಕನ್ನಡ ರಾಜ್ಯೋತ್ಸವದ ಕುರಿತು ಭಾಷಣ ಮಾಡಿದರು.

ಚಿ. ಪಿ.ಹರೀಶ್ ಅತಿಥಿಗಳ ಪರಿಚಯ ಮಾಡಿದರೆ, ಕು. ಎಸ್.ಸಿ. ಕಾವ್ಯ ವಂದಿಸಿದರು. ಕು. ಎಸ್.ಕೀರ್ತನಾ ಕಾರ್ಯಕ್ರಮ ನಿರೂಪಿಸಿದರು.

# ಗೋವಾ ರಾಷ್ಟ್ರೀಯ ಕೀಡಾಕೂಟಕ್ಕೆ ನಗರದ ಖೋ-ಖೋ ಕ್ರೀಡಾಪಟುಗಳು

ದಾವಣಗೆರೆ ನ.3- ನಾಳೆ ದಿನಾಂಕ 4 ರಿಂದ 8 ರ ವರೆಗೆ ಗೋವಾದಲ್ಲಿ ನಡೆಯಲಿರುವ 37ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸುವ ರಾಜ್ಯ ಪುರುಷರ ಖೋ-ಖೋ ತಂಡಕ್ಕೆ ನಗರದ ಕ್ರೀಡಾ ವಸತಿ ನಿಲಯದ ಕ್ರೀಡಾಪಟುಗಳಾದ ಅರ್ಜುನ್, ಮಹಮ್ಮದ್ ತಾಸೀನ್ ಹಾಗೂ ಶರತ್ ಜೆ.ಜಿ ಅವರುಗಳು ಆಯ್ಕೆಯಾಗಿದ್ದಾರೆ.

ಆಯ್ಕೆಯಾಗಿರುವ ಕ್ರೀಡಾಪಟುಗಳು ಇಲಾಖೆ ತರಬೇತುದಾರರಾದ ರಾಮಲಿಂಗಪ್ಪ ಜೆ. ಮತ್ತು ಶ್ರೀಮತಿ ಸುನೀತ ಎಂ.ಸಿ. ಇವರ ಬಳಿ ತರಬೇತಿ ಪಡೆಯುತ್ತಿದ್ದಾರೆ.

ಖೋ-ಖೋ ತರಬೇತುದಾರ ರಾಮಲಿಂಗಪ್ಪ ಜೆ ಇವರು ಗೋವಾ ಕ್ರೀಡಾಕೂಟದಲ್ಲಿ ಭಾಗವಹಿಸುವ ರಾಜ್ಯ ಮಹಿಳೆಯರ ಖೋ-ಖೋ ತಂಡಕ್ಕೆ ತರಬೇತುದಾರರಾಗಿ ಆಯ್ಕೆಯಾಗಿರುತ್ತಾರೆ.

ರಾಜ್ಯ ತಂಡ ಉತ್ತಮ ಸಾಧನೆ ಮಾಡಲೆಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಶ್ರೀಮತಿ ಕೆ.ಆರ್.ಜಯಲಕ್ಷ್ಮಿ ಬಾಯಿ, ಇಲಾಖೆಯ ಅಧೀಕ್ಷಕರಾದ ಶ್ರೀಮತಿ ಅರ್ಪಿತ ಕೆ.ಜಿ. ಶುಭ ಕೋರಿದ್ದಾರೆ.

# ಬಸವರಾಜನ್, ಸೌಭಾಗ್ಯ ದಂಪತಿ ವಿರುದ್ಧದ ಮೊಕದ್ದಮೆ ರದ್ದು

(1ನೇ ಪುಟದಿಂದ) ಮೊಕದ್ದಮೆ ಹೂಡಿದ್ದರು. ಮುರುಘಾ ಶರಣರ ಬಂಧನದಲ್ಲಿ ತಮ್ಮದು ಯಾವುದೇ ಪಾತ್ರ - ಚಿತಾ ವಣೆ ಇಲ್ಲ, ವಿನಾಕಾರಣ ತಮ್ಮ ವಿರುದ್ಧ ಸುಳ್ಳು ಆರೋಪ ಮಾಡಿ, ಮೊಕದ್ದಮೆ ಹೂಡಿ ಬಂಧನಕ್ಕೊಳಗಾ ಗುವಂತೆ ಮಾಡಲಾಗಿದ್ದು, ಇದರಿಂದ ತಮ್ಮ ವ್ಯಕ್ತಿತ್ವಕ್ಕೆ ಧಕ್ಕೆ ಯುಂ ಟಾಗಿದೆ. ಕಾರಣ, ತಮ್ಮ ವಿರುದ್ಧ ಹೂಡಿರುವ ಮೊಕದ್ದ ಮೆಯನ್ನು ರದ್ದುಪಡಿಸುವಂತೆ ಬಸವರಾಜನ್ ಮತ್ತು ಸೌಭಾಗ್ಯ ದಂಪತಿ ಅರ್ಜಿ ಸಲ್ಲಿಸಿ ಮನವಿ ಮಾಡಿಕೊಂಡಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ವಾದ - ವಿವಾದವನ್ನು ಸುದೀರ್ಘವಾಗಿ ಆಲಿಸಿದ ರಾಜ್ಯ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ದೇವದಾಸ್ ಅವರು, ಬಸವರಾಜನ್ ಮತ್ತು ಸೌಭಾಗ್ಯ ದಂಪತಿ ವಿರುದ್ಧದ ಮೊಕದ್ದಮೆಯಲ್ಲಿ ಯಾವುದೇ ಹುರುಳಿಲ್ಲ ಎಂದು ತೀರ್ಮಾನಿಸಿ, ಮೊಕದ್ದಮೆಯನ್ನು ರದ್ದುಪಡಿಸಿ ಇಂದು ಆದೇಶಿಸಿದ್ದಾರೆ.

ಬಸವರಾಜನ್ ಮತ್ತು ಸೌಭಾಗ್ಯ ದಂಪತಿ ಪರ ರಾಜ್ಯ ಉಚ್ಚ ನ್ಯಾಯಾಲಯದ ಹಿರಿಯ ನ್ಯಾಯವಾದಿ ಅಸ್ಮತ್ ಪಾಷಾ ವಕಾಲತ್ತು ವಹಿಸಿದ್ದರು.

# ಹರಪನಹಳ್ಳಿಯಲ್ಲಿ ವಿಕಾಸ ಬ್ಯಾಂಕ್ 10ನೇ ಶಾಖೆ ಉದ್ಘಾಟನೆ

ಹರಪನಹಳ್ಳಿ, ನ.3- ಸಹಕಾರ ಕ್ಷೇತ್ರದ ಸಂವರ್ಧನೆ ಕಾರ್ಯಕ್ಕೆ ವಿಕಾಸ ಬ್ಯಾಂಕ್ ತನ್ನದೇ ಆದ ಕೊಡುಗೆಯನ್ನು ನೀಡಿದೆ ಎಂದು ತೆಗ್ಗಿನ ಮಠ ಸಂಸ್ಥಾನದ ಪೀಠಾಧ್ಯಕ್ಷ ಶ್ರೀ ವರಸದ್ಯೋಜಾತ ಶಿವಾಚಾರ್ಯ ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದ ಕೊಟ್ಟೂರು ರಸ್ತೆಯ ಬಳಿ ನೂತನ ವಿಕಾಸ ಬ್ಯಾಂಕಿನ 10ನೇ ಶಾಖೆಯನ್ನು ಉದ್ಘಾಟಿಸಿ ಶ್ರೀಗಳು ಆಶೀರ್ವಚನ ನೀಡಿದರು. ಜೀವನದಲ್ಲಿ ಪ್ರತಿಯೊಬ್ಬ ಮನುಷ್ಯನೂ ಆರ್ಥಿಕವಾಗಿ ಬೆಳೆಯಬೇಕಾದರೆ ಬ್ಯಾಂಕ್‌ಗಳ ಮೇಲೆ ಅವಲಂಬಿತರಾಗಬೇಕಾಗುತ್ತದೆ. ಸೌಲಭ್ಯ ವನ್ನು ಪಡೆದು ವ್ಯವಹಾರಿಕವಾಗಿ ವ್ಯವಹರಿಸಿ ಸಾಲವನ್ನು ಮರುಪಾವತಿ ಮಾಡಿದಾಗ ಬ್ಯಾಂಕ್ ಸಹ ಉನ್ನತಿಗೆ ಕಾರಣವಾಗುತ್ತದೆ ಎಂದು ಪ್ರತಿಪಾದಿಸಿದರು.



ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಬ್ಯಾಂಕ್ ಅಧ್ಯಕ್ಷ ಜಿ.ನಂಜನಗೌಡ ಮಾತನಾಡಿ, ಆಧುನಿಕ ಯುಗದಲ್ಲಿ ಸ್ಪರ್ಧೆಗಳು ಹೆಚ್ಚಾಗಿದ್ದು, ಅದಕ್ಕೆ ತಕ್ಕಂತೆ ಈ ಬ್ಯಾಂಕ್ ಸಹ ವರ್ಷದ 365 ದಿನಗಳ ಕಾಲ ಸೇವೆಯನ್ನು ಒದಗಿಸುತ್ತಿದೆ ಎಂದು ತಿಳಿಸಿದರು.

ವಿಕಾಸ ಬ್ಯಾಂಕ್ ಅಧ್ಯಕ್ಷ ವಿಶ್ವನಾಥ್ ಹಿರೇಮಠ್ ಮಾತನಾಡಿ, ಬ್ಯಾಂಕಿನ ಪ್ರಗತಿಯನ್ನು ಮಾರ್ಮಿಕವಾಗಿ ವಿವರಿಸಿದರು.

ಈ ಸಂದರ್ಭದಲ್ಲಿ ವ್ಯವಸ್ಥಾಪಕ ನಿರ್ದೇಶಕ ಪ್ರಸನ್ನ ಹಿರೇಮಠ್, ನಿರ್ದೇಶಕರುಗಳಾದ ಶ್ರೀಮತಿ ಛಾಯಾ ದಿವಾಕರ್, ರಮೇಶ್ ಪುರೋಹಿತ್, ಕೆ.ವಿಕಾಸ, ಎಂ. ವೆಂಕಪ್ಪ ಹಾಗೂ ಪುರಸಭೆಯ ಮಾಜಿ ಅಧ್ಯಕ್ಷ ಎಂ. ರಾಜಶೇಖರ್, ಅಂಬ್ಲಿ ಮಂಜುನಾಥ, ದಿವಾಕರ್, ವೆಂಕಪ್ಪ, ಅನಂತ ಜೋಷಿ, ಪ್ರಸನ್ನ ಹಿರೇಮಠ್, ಗುಡ್ಡನಗೌಡ ಪಾಟೀಲ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಏಕಲವ್ಯ ಪ್ರಶಸ್ತಿಗೆ ಜಿಲ್ಲೆಯ ಅರ್ಹ ಕ್ರೀಡಾಪಟುಗಳಿಂದ ಅರ್ಜಿ ಆಹ್ವಾನ

ದಾವಣಗೆರೆ, ನ. 3 - ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಕ್ರೀಡಾ ಕ್ಷೇತ್ರದಲ್ಲಿ ಅಸಾಧಾರಣ ಪ್ರತಿಭೆ ಪ್ರದರ್ಶಿಸಿದ ಪ್ರತಿಭಾನ್ವಿತ ಕ್ರೀಡಾಪಟುಗಳಿಂದ ಪ್ರಸಕ್ತ ಸಾಲಿನ ಏಕಲವ್ಯ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಜಿಲ್ಲೆಯ ಆಸಕ್ತ ಮತ್ತು ಅರ್ಹ ಕ್ರೀಡಾಪಟುಗಳು ಇದೇ ದಿನಾಂಕ 20 ರೊಳಗಾಗಿ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿರುವ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಿಂದ ಅರ್ಜಿ ನಮೂನೆ ಪಡೆದು ಭರ್ತಿ ಮಾಡಿ ಸಲ್ಲಿಸಬೇಕು. ಮಾಹಿತಿಗೆ ಕಚೇರಿ ದೂ. 08192 237480 ಗೆ ಸಂಪರ್ಕಿಸಲು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕಿ ಕೆ.ಆರ್. ಜಯಲಕ್ಷ್ಮಿ ಬಾಯಿ ತಿಳಿಸಿದ್ದಾರೆ.

# ಜಿಎಸ್ಟಿ ತೆರಿಗೆ ಬೇಡಿಕೆಗೆ ಕ್ಷಮಾದಾನದ ಅವಕಾಶ

ನವದೆಹಲಿ, ನ. 3 – ಜಿ.ಎಸ್.ಟಿ. ತೆರಿಗೆ ಬೇಡಿಕೆ ಆದೇಶಗಳಿಗೆ ಸಂಬಂಧಿಸಿದಂತೆ ಕೇಂದ್ರ ಹಣಕಾಸು ಸಚಿವಾಲಯ ಕ್ಷಮಾದಾನ ಯೋಜನೆ ಆರಂಭಿಸಿದೆ. ಈ ಯೋಜನೆಯು ಜನವರಿ 31, 2024ರವರೆಗೆ ಲಭ್ಯವಿರಲಿದೆ. ಮಾರ್ಚ್ 31, 2023ಕ್ಕೆ ಮುಂಚೆ ತೆರಿಗೆ ಸಂಬಂಧ ಹೊರಡಿಸಿದ ಆದೇಶಗಳಿಗೆ ಸಂಬಂಧಿಸಿದಂತೆ ಕ್ಷಮಾದಾನ ಅರ್ಜಿ ಸಲ್ಲಿಸಬಹುದು.

# ಗಿಡ ಬೆಳೆಸುವುದರಿಂದ ವೈಯಕ್ತಿಕ ಲಾಭಕ್ಕಿಂತ ಪರಿಸರಕ್ಕೆ ಹೆಚ್ಚಿನ ಅನುಕೂಲ



ಮಲೇಬೆನ್ನೂರು, ನ. 3- ಜಿಗಳಿ ಗ್ರಾಮದ ನಾಗಸನಹಳ್ಳಿ ಬಸವರಾಜ್ ಅವರ ತೋಟದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ಗುರುವಾರ ರೈತರಿಗೆ ಗೋಡಂಬಿ ಗಿಡಗಳನ್ನು ವಿತರಣೆ ಮಾಡಲಾಯಿತು.

ಯೋಜನೆಯ ಕೃಷಿ ಅಧಿಕಾರಿ ಗಂಗಾಧರ್ ಮಾತನಾಡಿ, ಗೋಡಂಬಿ ವಾಣಿಜ್ಯ ಬೆಳೆಯಾಗಿದ್ದು, ಗಿಡಗಳನ್ನು ಉಚಿತವಾಗಿ ನೀಡುತ್ತಿದ್ದೇವೆ. ರೈತರು ಈ ಗಿಡಗಳನ್ನು ನೀರಿಲ್ಲದೆ ಒಣಗಿಸದೆ, ತೋಟ ಅಥವಾ ಮನೆಯ ಬಳಿ ಇರುವ ಜಾಗದಲ್ಲಿ ನೆಟ್ಟು ತಮ್ಮ ಮಗುವಿನಂತೆ ಬೆಳೆಸಬೇಕೆಂದರು. ಒಟ್ಟು 6800 ಗಿಡಗಳನ್ನು ಜಿಗಳಿ ಮತ್ತು ಕೆ.ಎನ್. ಹಳ್ಳಿ ವಲಯದ ರೈತರಿಗೆ ವಿತರಣೆ ಮಾಡಲಾಗು ವುದೆಂದರು.

ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ ಜಿ. ಆನಂದಪ್ಪ ಮಾತನಾಡಿ, ಡಾ. ವೀರೇಂದ್ರ ಹೆಗ್ಗಡೆ ಅವರು ರೈತರ ಬಗ್ಗೆ ಬಹಳ ವಿಶೇಷ ಕಾಳಜಿ ಹೊಂದಿದ್ದು, ರೈತರಿಗೆ ಬೇಕಾದ ಅಗತ್ಯ ಸೌಲಭ್ಯಗಳನ್ನು ಯೋಜನೆಯಿಂದ ನೀಡುತ್ತಿದ್ದಾರೆ. ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದರು.

ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಹಾಗೂ ಪತ್ರಕರ್ತ ಜಿಗಳಿ ಪ್ರಕಾಶ್ ಮಾತನಾಡಿ, ಒಂದು ಗಿಡ ಬೆಳೆಸುವುದರಿಂದ ವೈಯಕ್ತಿಕ ಲಾಭಕ್ಕಿಂತ ಪರಿಸರಕ್ಕೆ ಹೆಚ್ಚಿನ ಅನುಕೂಲವಾಗಲಿದೆ. ಅದರಿಂದ ನಮಗೆ ಗಾಳಿ, ನೆರಳು ಸೇರಿದಂತೆ ಇತ್ಯಾದಿ ಅನುಕೂಲವಾಗಲಿದೆ ಎಂದರು.

## ಗೋಡಂಬಿ ಗಿಡ ವಿತರಣೆಯಲ್ಲಿ ಹಿರಿಯ ಪತ್ರಕರ್ತ ಜಿಗಳಿ ಪ್ರಕಾಶ್

ಗ್ರಾಮದ ಮುಖಂಡ ಬನ್ನಿಕೋಡು ನಾಗರಾಜಪ್ಪ, 'ಎ'ಒಕ್ಕೂಟದ ಅಧ್ಯಕ್ಷ ರುದ್ರಗೌಡ, ಉಪಾಧ್ಯಕ್ಷ ನಾಗಸನಹಳ್ಳಿ ಬಸವರಾಜ್, 'ಬಿ' ಒಕ್ಕೂಟದ ಅಧ್ಯಕ್ಷ ಕೃಷ್ಣಕುಮಾರ್, ಉಪಾಧ್ಯಕ್ಷ ವಿಜಯ ಭಾಸ್ಕರ್, ಪದಾಧಿಕಾರಿ ಹೇಮಾವತಿ, ಸಂಪನ್ಮೂಲ ವ್ಯಕ್ತಿ ಹೆಚ್. ಎಂ. ಸದಾನಂದ್, ಸೇವಾ ಪ್ರತಿನಿಧಿಗಳಾದ ನಾಗರತ್ನ, ಮಮತಾ ಸೇರಿದಂತೆ, ರೈತರು ಈ ವೇಳೆ ಹಾಜರಿದ್ದರು.

# ಆಂಜನೇಯ ಬಡಾವಣೆಯಲ್ಲಿ ಇಂದು ಹಿತರಕ್ಷಣಾ ಸಮಿತಿ ಸಭೆ

ದಾವಣಗೆರೆಯ ಆಂಜನೇಯ ಬಡಾವಣೆ ನಾಗರಿಕ ಹಿತರಕ್ಷಣಾ ಸಮಿತಿಯ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಇಂದು ಬೆಳಿಗ್ಗೆ 11 ಗಂಟೆಗೆ ಸಮಿತಿ ಕಾರ್ಯಾಲಯದಲ್ಲಿ ಕರೆಯಲಾಗಿದೆ ಎಂದು ಸಮಿತಿ ಕಾರ್ಯದರ್ಶಿ ಶ್ರೀಮತಿ ವಸಂತ ತಿಳಿಸಿದ್ದಾರೆ.



## ವಿಜಯ್ ಬಾಬು ವಿ. ನಿಧನ



ದಾವಣಗೆರೆ ಸಿಟಿ ಎಂ.ಸಿ.ಸಿ. 'ಎ' ಬ್ಲಾಕ್ 2ನೇ ಮೇನ್, 2ನೇ ಕ್ರಾಸ್ ವಾಸಿ ಶ್ರೀ ನಾಗರಾಜ ಸಿ. ಎನ್. ಇವರ ಮೊಮ್ಮಗನಾದ **ಕು|| ವಿಜಯ್ ಬಾಬು ವಿ.** ಅವರು ದಿನಾಂಕ 03-11-2023ರ ಶುಕ್ರವಾರ ರಾತ್ರಿ 8.30ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 23 ವರ್ಷ ವಯಸ್ಸಾಗಿತ್ತು. ತಂದೆ, ತಾಯಿ, ಅಜ್ಜ, ಅಜ್ಜಿ, ಚಿಕ್ಕಪ್ಪ, ಚಿಕ್ಕಮ್ಮ, ತಮ್ಮಂದಿರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 04-11-2023ರ ಶನಿವಾರ ಮಧ್ಯಾಹ್ನ 12.30 ಗಂಟೆಗೆ ಶಾಮನೂರಿನ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
**ಶ್ರೀಮತಿ ಅರುಂಧತಿ ಮತ್ತು ವೀರೇಶ್ ಮತ್ತು ಕುಟುಂಬ ವರ್ಗದವರು**
**ಮೊ. : 9945331310, 9449824871**

## ಕೆ.ಎಂ. ಮಂಜುನಾಥ ಸ್ವಾಮಿ ನಿಧನ



ದಾವಣಗೆರೆ ಎಂಸಿಸಿ 'ಎ' ಬ್ಲಾಕ್, ಬಕ್ಕೇಶ್ವರ ಹೈಸ್ಕೂಲ್ ಹಿಂಭಾಗದ ವಾಸಿ ಕೆ.ಎಂ. ಮಂಜುನಾಥ ಸ್ವಾಮಿ (70) (ಯುನೈಟೆಡ್ ಇಂಡಿಯಾ ಜನರಲ್ ಇನ್ಶೂರೆನ್ಸ್ ಕಂಪನಿ) ಇವರು ದಿನಾಂಕ 03.11.2023ರ ಶುಕ್ರವಾರ ಬೆಳಿಗ್ಗೆ 9.49ಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರಿ, ಓರ್ವ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 04.11.2023ರ ಶನಿವಾರ ಬೆಳಿಗ್ಗೆ 10.30ಕ್ಕೆ ಶಾಮನೂರು ಗ್ಲಾಸ್ ಹೌಸ್ ಬಳಿ ಇರುವ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

## ಅಣಜಿ ಸರೋಜಮ್ಮ ನಿಧನ



ದಾವಣಗೆರೆ ಶಿವಕುಮಾರ ಸ್ವಾಮಿ ಬಡಾವಣೆ 2ನೇ ಮೇನ್ 'ಸಿ' ಕ್ರಾಸ್ ವಾಸಿ, ನಿವೃತ್ತ ಶಿಕ್ಷಕರಾದ ಅಣಜಿ ಬಸವನಗೌಡ ಇವರ ಪತ್ನಿ **ಶ್ರೀಮತಿ ಸರೋಜಮ್ಮ** ಅವರು ದಿನಾಂಕ 03-11-2023ರ ಶುಕ್ರವಾರ ಸಂಜೆ 5.30 ಕ್ಕೆ ನಿಧನರಾದರು. ಮೃತರಿಗೆ 80 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಓರ್ವ ಪುತ್ರಿ ಹಾಗೂ ಸೊಸೆ, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 04-11-2023ರ ಶನಿವಾರ ಮಧ್ಯಾಹ್ನ 1 ಗಂಟೆಗೆ ಶಾಮನೂರು ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ. : 93413 10630, 96062 82832**

## ಖ್ಯಾತ ಲೆಕ್ಕ ಪರಿಶೋಧಕರೂ, ತೆರಿಗೆ ಸಲಹೆಗಾರರಾದ ಪ್ರಮೋದ್ ಪಿ. ಕಲುಬುರ್ಗಿ ನಿಧನ



ದಾವಣಗೆರೆ ಪಿ.ಜೆ. ಬಡಾವಣೆ, 4ನೇ ಮೇನ್, 7ನೇ ಕ್ರಾಸ್ ವಾಸಿ, ದಾವಣಗೆರೆ ಎಸ್.ಎಸ್.ಕೆ. ಸಮಾಜದ ಮಾಜಿ ಅಧ್ಯಕ್ಷರೂ, ಖ್ಯಾತ ಲೆಕ್ಕ ಪರಿಶೋಧಕರೂ ಮತ್ತು ತೆರಿಗೆ ಸಲಹೆಗಾರರೂ ಆದ **ಶ್ರೀ ಪ್ರಮೋದ್ ಪಿ. ಕಲುಬುರ್ಗಿ** ಅವರು ದಿನಾಂಕ 03-11-2023ರ ಶುಕ್ರವಾರ ರಾತ್ರಿ 7.30 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 67 ವರ್ಷ ವಯಸ್ಸಾಗಿತ್ತು. ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 04-11-2023ರ ಶನಿವಾರ ಮಧ್ಯಾಹ್ನ 12 ಗಂಟೆಗೆ ಪಿ.ಬಿ. ರಸ್ತೆಯಲ್ಲಿರುವ ವೈಕುಂಠ ಧಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ. : 99866 73212**

## ನಿಟ್ಟೂರು ಗ್ರಾಮದ ಸಣ್ಣಗೌಡ್ರ ಮಲ್ಲೇಶಪ್ಪ ನಿಧನ



ಹರಿಹರ ತಾಲ್ಲೂಕಿನ ನಿಟ್ಟೂರು ಗ್ರಾಮದ ಹಿರಿಯರು, ವಿಎಸ್‌ಎಸ್‌ಎನ್ ಮಾಜಿ ಅಧ್ಯಕ್ಷರೂ ಆದ
**ಶ್ರೀ ಸಣ್ಣಗೌಡ್ರ ಮಲ್ಲೇಶಪ್ಪ** (75 ವರ್ಷ)
ಇವರು ದಿನಾಂಕ : 03.11.2023ರ ಶುಕ್ರವಾರ ಮಧ್ಯಾಹ್ನ 2 ಗಂಟೆಗೆ ನಿಧನರಾದರು. ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 04.11.2023ರ ಶನಿವಾರ ಬೆಳಿಗ್ಗೆ 12 ಗಂಟೆಗೆ ನಿಟ್ಟೂರಿನಲ್ಲಿ ನೆರವೇರಲಿದೆ.

ದುಃಖತಪ್ತರು :
**ಸಣ್ಣಗೌಡ್ರ ಅಜ್ಜಯ್ಯ, ಸಣ್ಣಗೌಡ್ರ ಆಂಜನೇಯ ಮತ್ತು ಮಕ್ಕಳು ಮಾವಂದಿರು, ಅಳಿಯಂದಿರು, ಸಣ್ಣಗೌಡ್ರ ವಂಶಸ್ಥರು ನಿಟ್ಟೂರು ಗ್ರಾಮಸ್ಥರು ಮತ್ತು ಬಂಧು-ಮಿತ್ರರು**


KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

BSC®

B.S. CHANNABASAPPA & SONS

ಸ್ಥಾಪನೆ - 1938

ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ
ಬ್ರಾಂಡ್ಯಗಳು BSC ವಿಶೇಷ ಬೆಲೆಯಲ್ಲಿ ಲಭ್ಯ

#ಬಟ್ಟೆಅಂದರೆBSC



## MEN'S FASHION BRANDS

ARROW USA·1851 | LOUIS PHILIPPE | Manyavar | BLACKBERRYS | TOMMY HILFIGER | spykar | OXEMBERG
Pepe Jeans LONDON | Levi's | LINEN CLUB | MUFTI | INDIAN TERRAIN | PETER ENGLAND | UNITED COLORS OF BENETTON.
U.S. POLO ASSN. | VAN HEUSEN POWER DRESSING | Allen Solly | KILLER | PUMA | PARK AVENUE | ROOKIES

## WOMEN'S FASHION BRANDS

aurelia | W | Levi's

## KID'S FASHION BRANDS

UNITED COLORS OF BENETTON. | Pepe Jeans LONDON | INDIAN TERRAIN | Allen Solly | U.S. POLO ASSN.

# ಬಿ.ಎಸ್.ಚನ್ನಬಸಪ್ಪ & ಸನ್ಸ್

## ದಾವಣಗೆರೆ & ಬೆಳಗಾವಿ

## ಸಂಕ್ಷಿಪ್ತ ಸುದ್ದಿ

**ದೆಹಲಿ ಹೊರಗಡೆಯೂ ಸಬ್ಸಿಡಿ ಈರುಳ್ಳಿ ಮಾರಾಟ**
ನವದೆಹಲಿ : ದೆಹಲಿ ಅಷ್ಟೇ ಅಲ್ಲದೇ ಬೇರೆ ರಾಜ್ಯಗಳಲ್ಲೂ ಸಬ್ಸಿಡಿ ದರದಲ್ಲಿ ಈರುಳ್ಳಿ ಮಾರುವುದಾಗಿ ಸಹಕಾರಿ ಸಂಸ್ಥೆಯಾದ ಎನ್.ಸಿ.ಸಿ.ಎಫ್. ತಿಳಿಸಿದೆ. ದೆಹಲಿಯಲ್ಲಿ ಎನ್.ಸಿ.ಸಿ.ಎಫ್. ಕೆಜಿಗೆ 25 ರೂ. ದರದಲ್ಲಿ ಈರುಳ್ಳಿ ಮಾರುತ್ತಿದೆ. ಈರುಳ್ಳಿ ಬೆಲೆ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಈ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

**ಪಾಕ್ : ಉಗ್ರರ ದಾಳಿಯಲ್ಲಿ 14 ಸೈನಿಕರ ಸಾವು**
ಇಸ್ಲಾಮಾಬಾದ್ : ಪಾಕಿಸ್ತಾನದ ಬಲೂಚಿಸ್ತಾನದಲ್ಲಿ ಭದ್ರತಾ ಪಡೆಗಳಿದ್ದ ವಾಹನಗಳ ಮೇಲೆ ಉಗ್ರರು ದಾಳಿ ನಡೆಸಿದ್ದು, ಕನಿಷ್ಠ 14 ಸೈನಿಕರು ಸಾವನ್ನಪ್ಪಿದ್ದಾರೆ. ಗ್ವಾಡರ್ ಜಿಲ್ಲೆಯ ಪಸ್ನಿ - ಓರ್ಮರ ನಡುವಿನ ಮಾರ್ಗದಲ್ಲಿ ಈ ದಾಳಿ ನಡೆಸಲಾಗಿದೆ.

**ರಾಜ್ಯಸಭಾಧ್ಯಕ್ಷರಿಗೆ ಬೇಷರತ್ ಕ್ಷಮೆ ಯಾಚಿಸಲು ಚಡ್ಡಾಗೆ ಸೂಚನೆ**
ನವದೆಹಲಿ : ಸದನ ಸಮಿತಿಗೆ ಸಂಬಂಧಿಸಿದಂತೆ ನೀಡಿದ ಹೇಳಿಕೆಗಾಗಿ ಆಮ್ ಆದ್ಮಿ ಪಾರ್ಟಿ ಸಂಸದ ರಾಘವ್ ಚಡ್ಡ ಅವರು ರಾಜ್ಯಸಭಾಧ್ಯಕ್ಷ ಜಗದೀಪ್ ಧನಕರ್ ಭೇಟಿ ಮಾಡಿ ಭೇಷರತ್ ಕ್ಷಮೆ ಯಾಚಿಸಬೇಕು ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ. ಸದನ ಸಮಿತಿಗೆ ಸಂಬಂಧಿಸಿದಂತೆ ಚಡ್ಡಾ ಸುಳ್ಳು ಹೇಳಿಕೆ ನೀಡಿದ್ದಾರೆ ಎಂದು ಅವರನ್ನು ಅಮಾನತ್ತುಗೊಳಿಸಲಾಗಿತ್ತು. ಈ ಬಗ್ಗೆ ಚಡ್ಡಾ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.


**ದೆಹಲಿ ಸಚಿವ ಆನಂದ್ ವಿರುದ್ಧ ಹವಾಲಾ ಆರೋಪ**
ನವದೆಹಲಿ : ದೆಹಲಿ ಸಚಿವ ಹಾಗೂ ಆಮ್ ಆದ್ಮಿ ಪಾರ್ಟಿ ನಾಯಕ ರಾಜ್ ಕುಮಾರ್ ಆನಂದ್ ಅವರು ಹವಾಲಾ ಮೂಲಕ ಚೀನಾಗೆ ಹಣ ಪಾವತಿ ಮಾಡಿದ್ದಾರೆ ಹಾಗೂ 7 ಕೋಟಿ ರೂ. ತೆರಿಗೆ ವಂಚಿಸಿದ್ದಾರೆ ಎಂದು ಕಂದಾಯ ಗುಪ್ತಚರ ನಿರ್ದೇಶನಾಲಯ ಆರೋಪಿಸಿದೆ.

**ತೀವ್ರ ಹಂತಕ್ಕೆ ತಲುಪಿದ ದೆಹಲಿ ವಾಯುಮಾಲಿನ್ಯ**
ನವದೆಹಲಿ : ರಾಜಧಾನಿ ದೆಹಲಿ ವಾಯು ಮಾಲಿನ್ಯ ಶುಕ್ರವಾರದಂದು ಅತಿ ತೀವ್ರ ಹಂತಕ್ಕೆ ತಲುಪಿದೆ. ಆದರೆ, ರಾಜಧಾನಿ ವಲಯದ ವಾಯುಗುಣಮಟ್ಟ ಈಗಾಗಲೇ ಸುಧಾರಣೆಯ ಸಂಕೇತ ನೀಡುತ್ತಿದೆ ಎಂದು ಹೇಳಿರುವ ಕೇಂದ್ರ ಸರ್ಕಾರ ಕಠಿಣ ನಿರ್ಬಂಧ ಜಾರಿಯನ್ನು ಮುಂದೂಡಿದೆ.

**ಬಾಘೇಲ್ 508 ಕೋಟಿ ರೂ. ಪಡೆದಿದ್ದು ಬಯಲು**
ನವದೆಹಲಿ : ಛತ್ತೀಸ್‌ಘಡದ ಮುಖ್ಯಮಂತ್ರಿ ಭುಪೇಶ್ ಬಾಘೇಲ್ ಅವರಿಗೆ ಬೆಟ್ಟಿಂಗ್ ಆಪ್ ಕಂಪನಿಯಾದ ಮಹದೇವ್ ಪ್ರವರ್ತಕರು 508 ಕೋಟಿ ರೂ. ಲಂಚ ನೀಡಿದ ಪ್ರಕರಣ ಬೆಳಕಿಗೆ ಬಂದಿದೆ ಎಂದು ಜಾರಿ ನಿರ್ದೇಶನಾಲಯ ತಿಳಿಸಿದೆ. ಹಣ ಸಾಗಿಸುತ್ತಿದ್ದ ವ್ಯಕ್ತಿಯ ಬಂಧನ ಹಾಗೂ ವಿಧಿ ವಿಜ್ಞಾನ ಸಾಕ್ಷಿಗಳಿಂದ ಈ ಮಾಹಿತಿ ದೊರೆತಿದೆ ಎಂದು ತನಿಖಾ ಸಂಸ್ಥೆ ಹೇಳಿದೆ.

**ಪಶ್ಚಿಮ ಏಷಿಯಾ ಕುರಿತು ಯುಎಇ ಅಧ್ಯಕ್ಷರ ಜೊತೆ ಪ್ರಧಾನಿ ಚರ್ಚೆ**
ನವದೆಹಲಿ : ಪ್ರಧಾನ ಮಂತ್ರಿ ನರೇಂದ್ರ ಮೋದಿ ಹಾಗೂ ಯುಎಇ ಅಧ್ಯಕ್ಷ ಮೊಹಮ್ಮದ್ ಬಿನ್ ಜಯೀದ್ ಅಲ್ ನಹ್ಯಾನ್ ಅವರು ಪಶ್ಚಿಮ ಏಷಿಯಾ ಪರಿಸ್ಥಿತಿ ಕುರಿತು ಚರ್ಚಿಸಿದ್ದಾರೆ. ಉಗ್ರವಾದ, ಕುಸಿಯುತ್ತಿರುವ ಭದ್ರತಾ ಪರಿಸ್ಥಿತಿ ಹಾಗೂ ಈ ವಲಯದಲ್ಲಿ ನಾಗರಿಕರ ಸಾವಿಗೆ ಉಭಯರು ಕಳವಳ ವ್ಯಕ್ತಪಡಿಸಿದ್ದಾರೆ.

# ಸರ್ಕಾರ-ಪಕ್ಷ ಎರಡರಲ್ಲೂ ಗೊಂದವಿಲ್ಲ : ಸಚಿವ ಭೈರೇಗೌಡ



ದಾವಣಗೆರೆ, ನ.3- ಕಾಂಗ್ರೆಸ್ ಪಕ್ಷ, ಸರ್ಕಾರದಲ್ಲಾಗಲಿ ಯಾವುದೇ ಗೊಂದಲ ಇಲ್ಲ ಎಂದು ಕಂದಾಯ ಸಚಿವ ಕೃಷ್ಣ ಭೈರೇಗೌಡ ಸ್ಪಷ್ಟಪಡಿಸಿದ್ದಾರೆ.

ಇಂದಿಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಆರು ತಿಂಗಳಾಗಿದ್ದು ಯಾವುದೇ ಗೊಂದಲ ಇಲ್ಲ. ಆದರೆ ವಿಧಾನಸಭೆ ಹಾಗೂ ವಿಧಾನ ಪರಿಷತ್‌ನಲ್ಲಿ ಪ್ರತಿಪಕ್ಷದ ನಾಯಕರಿಲ್ಲ. ಈ ವಿಷಯ ಮರೆಮಾಚಲು ಬಿಜೆಪಿಯವರು ದಿನಕ್ಕೊಂದು ಸುದ್ದಿ ಹರಡಿಸುತ್ತಿದ್ದಾರೆ ಎಂದರು.

ಮುಖ್ಯಮಂತ್ರಿ ಅಧಿಕಾರವಧಿ ಬಗ್ಗೆ ನಾನು ಪ್ರತಿಕ್ರಿಯಿಸುವುದಿಲ್ಲ. ರಾಜ್ಯಕ್ಕೆ ಕೇಂದ್ರದ ಬರ ಅಧ್ಯಯನ ತಂಡ ಬಂದು ಹೋಗಿದೆ. ಒಟ್ಟು 17 ಸಾವಿರ ಕೋಟಿಯಷ್ಟು ಬೆಳೆ ಹಾನಿ ಅಂದಾಜಿಸಲಾಗಿದೆ ಎಂದು ಹೇಳಿದರು.

# ಶಾಲೆಗಳಲ್ಲಿ ಕನ್ನಡ ಕಡ್ಡಾಯಗೊಳಿಸಲಿ

**(1ನೇ ಪುಟದಿಂದ)** ಅವರ ಬೆಳಕು ಜಗತ್ತಿಗೇ ಪಸರಿಸುವಂತಹದ್ದು. ಸಮಾಜದಲ್ಲಿ ಅಸ್ಪಷ್ಟತೆ ಹೋಗಲಾಡಿಸಲು ಸಾಧ್ಯವಾಗುವುದು ಮಠಾಧೀಶರಿಂದ. ಜಾತಿ ಪ್ರಧಾನವಾಗಿರುವ ಇಂದಿನ ದಿನಗಳಲ್ಲಿ ಬಸವಣ್ಣನೇ ನಮಗೆ ಮಾದರಿ. ಲಿಂಗಾಯತ ಎನ್ನುವುದು ಸ್ವತಂತ್ರ ಧರ್ಮ ಆಗಬೇಕು ಎಂದು ಹೇಳಿದರು.

ಚಿಕ್ಕಮಗಳೂರಿನ ಡಾ. ಹೆಚ್.ಎಸ್.ಸತ್ಯನಾರಾಯಣರವರು ಕನ್ನಡ ಪ್ರಾಚೀನ ಸಾಹಿತ್ಯ ಸಿರಿ ಎಂಬ ವಿಷಯದ ಬಗ್ಗೆ ಮಾತನಾಡಿ, ಕನ್ನಡಿಗರು ವಿಶ್ವಶಾಂತಿ ಪ್ರಿಯರು. ಕನ್ನಡವು ಕನ್ನಡವನ್ನು ಕನ್ನಡಿಸುವಂತಿರಬೇಕು. ಕಲಿಕೆಗೆ ಸಾವಿಲ್ಲ, ನಮ್ಮ ಸಾಹಿತ್ಯ ಸಿರಿ ದೊಡ್ಡದಾಗಿದೆ.

ಕನ್ನಡವು ನಮ್ಮನ್ನು ಬೆಳೆಸಿದೆ, ನಾವು ಕನ್ನಡವನ್ನು ಬೆಳೆಸಬೇಕು ಅಷ್ಟೇ. ಕನ್ನಡವನ್ನು ಪ್ರೀತಿಸಿ, ಗೌರವಿಸಿ, ಕನ್ನಡದ ಮೌಲ್ಯಗಳನ್ನು ಮಕ್ಕಳಿಗೆ ತಿಳಿಸಬೇಕಾಗಿದೆ ಎಂದು ತಿಳಿಸಿದರು.

ಶಿವಮೊಗ್ಗದ ಶುಭ ಮರವಂತೆ ನಡುಗನ್ನಡ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು, ಬೆಂಗಳೂರಿನ ಡಾ. ಟಿ.ಯಲ್ಲಪ್ಪ ಬಂಡಾಯ ಮತ್ತು ದಲಿತ ಕಾವ್ಯದ ವಿಭಿನ್ನ ನೆಲೆಗಳು ಕುರಿತು ಹಾಗೂ ಚಿತ್ರದುರ್ಗದ ಸಿ.ಬಿ.ಶೈಲ ಜಯಕುಮಾರ್ ಕನ್ನಡ ಮಹಿಳಾ ಸಾಹಿತ್ಯ ನಡೆದು ಬಂದ ದಾರಿ ವಿಷಯಗಳ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ದಾವಣಗೆರೆ, ಚಿತ್ರದುರ್ಗ ಹಾಗೂ ಉಡುಪಿ ಜಿಲ್ಲಾ ಕ.ಸಾ.ಪ ಅಧ್ಯಕ್ಷರಾದ ಬಿ.ವಾಮದೇವಪ್ಪ, ಕೆ.ಎಂ.ಶಿವಸ್ವಾಮಿ, ಸುರೇಂದ್ರ ಅಡಿಗ, ಶ್ರೀ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಪ್ರೊ. ಎಸ್.ಬಿ.ರಂಗನಾಥ್, ಆಡಳಿತಾಧಿಕಾರಿ ಹೆಚ್.ವಿ. ವಾಮದೇವಪ್ಪ, ಶ್ರೀ ಸಂಸ್ಥೆಯ ಅಧ್ಯಾಪಕರು, ವಿದ್ಯಾರ್ಥಿಗಳು ಇದ್ದರು.

ಕನ್ನಡ ರಾಜ್ಯೋತ್ಸವದ ಅಂಗವಾಗಿ ಶುಕ್ರವಾರ ಬೆಳಗ್ಗೆ ವಿವಿಧ ಜನಪದ ಕಲಾ ತಂಡಗಳೊಂದಿಗೆ ಭುವನೇಶ್ವರಿ ದೇವಿ ಪ್ರತಿಮೆ ಮೆರವಣಿಗೆಯು ಗ್ರಾಮದ ಪ್ರಮುಖ ಬೀದಿಗಳಲ್ಲಿ ಅದ್ದೂರಿಯಾಗಿ ಜರುಗಿತು. ಮೆರವಣಿಗೆಯಲ್ಲಿ ಕನ್ನಡ ನುಡಿಗಳು, ಘೋಷಣೆಗಳು, ಕನ್ನಡ ಬಾವುಟಗಳು ರಾರಾಜಿಸಿ ದವು. ನಂತರ ಕನ್ನಡ ಧ್ವಜಾರೋಹಣ ಮತ್ತು 5000 ವಿದ್ಯಾರ್ಥಿಗಳಿಂದ ಕನ್ನಡ ಗೀತೆಗಳ ಗಾಯನ ನಡೆಯಿತು.

# ಮಹಿಳಾ ಮೀಸಲು ಜಾರಿ ಆದೇಶ ಕಠಿಣ

**(1ನೇ ಪುಟದಿಂದ)** ಸೇರಿಸುವುದಾಗಿ ತಿಳಿಸಿತು. ಹಿಂದುಳಿದ ವರ್ಗದವರಿಗೆ ಮೀಸಲಾತಿ ಕಲ್ಪಿಸುವುದಕ್ಕೆ ಜನಗಣತಿ ಮಾಹಿತಿ ಬೇಕು ಎಂಬುದು ಅರ್ಥವಾಗುತ್ತದೆ. ಆದರೆ, ಮಹಿಳಾ ಮೀಸಲಾತಿಗೆ ಈ ಪ್ರಶ್ನೆ ಬರುವುದಿಲ್ಲ ಎಂದು ಠಾಕೂರ್ ಪರವಾಗಿ ಹಾಜರಿದ್ದ ಹಿರಿಯ ವಕೀಲ ವಿಕಾಸ್ ಸಿಂಗ್ ವಾದ ಮಂಡಿಸಿದರು. ನ್ಯಾಯಾಲಯ ಈ ರೀತಿಯ ಆದೇಶ ಹೊರಡಿಸುವುದು ಕಠಿಣವಾಗಿದೆ. ನಮಗೆ ನಿಮ್ಮ ವಾದ ಅರ್ಥವಾಗಿದೆ. ಆದರೆ, ಇದರಲ್ಲಿ ಇನ್ನೂ ಹಲವು ವಿಷಯಗಳಿವೆ. ಯಾವ ಸೀಟುಗಳನ್ನು ಮೀಸಲಿಡಬೇಕು ಎಂಬುದೂ ಸೇರಿದಂತೆ ಹಲವು ವಿಷಯಗಳಿವೆ ಎಂದು ಪೀಠ ಹೇಳಿತು. ನ್ಯಾಯಾಲಯ ಈ ಅರ್ಜಿಯನ್ನು ತಳ್ಳಿ ಹಾಕುವುದಿಲ್ಲ. ಆದರೆ, ಸರ್ಕಾರಕ್ಕೆ ನೋಟಿಸ್ ಕಳಿಸುವುದಿಲ್ಲ. ಬಾಕಿ ಇರುವ ವಿಷಯದ ಜೊತೆ ಸೇರಿಸಲಾಗುವುದು ಎಂದು ಪೀಠ ಹೇಳಿದೆ.

# ತರಕಾರಿ ಮಾರಾಟ ಬಿಟ್ಟು ಸೈಬರ್ ಅಪರಾಧ

## ಕರ್ನಾಟಕ ಸೇರಿ ಹತ್ತು ರಾಜ್ಯಗಳಲ್ಲಿ ವಂಚಿಸುತ್ತಿದ್ದವನ ಬಂಧನ

ಗುರ್ಗಾಂವ್, ನ. 3 - ತರಕಾರಿ ಮಾರುತ್ತಿದ್ದ ವ್ಯಕ್ತಿಯೋರ್ವ, ಸೈಬರ್ ಅಪರಾಧದ ಮೂಲಕ 21 ಕೋಟಿ ರೂ.ಗಳ ವಂಚನೆ ಮಾಡಿರುವುದು ಬೆಳಕಿಗೆ ಬಂದಿದೆ.

ರಿಷಭ್ ಶರ್ಮ ಎಂಬಾತ ಕರ್ನಾಟಕ ಸೇರಿ 10 ರಾಜ್ಯಗಳಲ್ಲಿ 37 ಅಪರಾಧಗಳನ್ನು ಮಾಡಿದ್ದಾನೆ ಹಾಗೂ 855 ಇತರೆ ಅಪರಾಧಗಳಿಗೆ ನೆರವಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ತಂಡಗಳ ಜೊತೆ ಕಾರ್ಯನಿರ್ವಹಿಸುತ್ತಿದ್ದ ಈತ ಚೀನಾ, ಸಿಂಗಪುರ ಹಾಗೂ ಹಾಂಕಾಂಗ್ ಮುಂತಾದ ದೇಶಗಳಿಗೆ ಹವಾಲಾ ಮತ್ತು ಕ್ರಿಪ್ಟೋ ಕರೆನ್ಸಿ ಮೂಲಕ ಹಣ ಕಳಿಸಿದ್ದಾನೆ ಎಂದು ಆರೋಪಿಸಲಾಗಿದೆ.

ಆರು ತಿಂಗಳ ಹಿಂದೆ ಈ ದಂಧೆಯಲ್ಲಿ ತೊಡಗಿದ್ದ ಶರ್ಮ, ಇತರೆ ತಂಡಗಳಿಂದ ಕಮೀಷನ್ ರೂಪದಲ್ಲಿ ಬಹುತೇಕ ಹಣ ಪಡೆದಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ.

27 ವರ್ಷದ ಶರ್ಮ ತರಕಾರಿ ವ್ಯಾಪಾರ ನಡೆಸುತ್ತಿದ್ದ. ಆದರೆ, ಕೊರೊನಾ ಅವಧಿಯಲ್ಲಿ ನಷ್ಟವಾದ ಕಾರಣ, ಆ ಕೆಲಸವನ್ನು ಬಿಟ್ಟಿದ್ದ. ನಂತರ ಸೈಬರ್ ವಂಚನೆಯಲ್ಲಿ ತೊಡಗಿಕೊಂಡ ಎಂದು ಪೊಲೀಸರು ಹೇಳಿದ್ದಾರೆ.

ಈತ ದೇಶದ 10 ರಾಜ್ಯಗಳಲ್ಲಿನ 37 ಪ್ರಕರಣಗಳಲ್ಲಿ ನೇರವಾಗಿ ಭಾಗಿಯಾಗಿದ್ದ. 855 ವಂಚನೆ ಪ್ರಕರಣಗಳಿಗೆ ನೆರವಾಗಿದ್ದ. ಅಕ್ಟೋಬರ್ 28ರಂದು ಉತ್ತರಾಖಂಡದ ಪೊಲೀಸರ ತಂಡ ಈತನ ಪತ್ತೆ ಮಾಡಿ ಬಂಧಿಸಿದೆ.

ಸ್ನೇಹಿತನೊಬ್ಬನ ನೆರವಿನಿಂದ ಶರ್ಮಾ ಜನರ ಫೋನ್ ಸಂಖ್ಯೆಗಳನ್ನು ಪಡೆದಿದ್ದ. ಅವರಿಗೆ ಕರೆ ಮಾಡಿ ಕೆಲಸ ಒದಗಿಸುವುದಾಗಿ ಆಮಿಷ ಒಡ್ಡುತ್ತಿದ್ದ. ಡೆಹರಾಡೂನ್‌ನ ಉದ್ಯಮಿಯೊಬ್ಬರಿಗೆ ಇತ್ತೀಚೆಗೆ 20 ಲಕ್ಷ ರೂ. ವಂಚಿಸಿದ್ದ ಎಂದು ಪೊಲೀಸರು ಹೇಳಿದ್ದಾರೆ.

ಮೊದಲು ಈತ ಮಾರಿಯಟ್ ಬೊನ್ವಾಯ್ ಕಂಪನಿಯ ಹೆಸರಿನಲ್ಲಿ ನಕಲಿ ವೆಬ್‌ಸೈಟ್ ಆರಂಭಿಸಿದ್ದ. ಇದು ಮೂಲ ಐಷಾರಾಮಿ ಹೋಟೆಲ್ ವೆಬ್ ಸೈಟ್ ಹೋಲುವಂತೆ ಇತ್ತು.

ಉದ್ಯೋಗ ನೇಮಕದ ಹೆಸರಿನಲ್ಲಿ ಈ ನಕಲಿ ವೆಬ್ ತಾಣದಲ್ಲಿ ಹೋಟೆಲ್ ಬಗ್ಗೆ ಒಳ್ಳೆಯ ಮಾತುಗಳ ರಿವ್ಯೂ ಮಾಡುವಂತೆ ತಿಳಿಸಲಾಗುತ್ತಿತ್ತು. ಇದಕ್ಕೆ ಆರಂಭದಲ್ಲಿ ಈ ಕೆಲಸಕ್ಕಾಗಿ ಹಣವನ್ನೂ ನೀಡಲಾಗುತ್ತಿತ್ತು.

ನಂತರ ಈ ಹೋಟೆಲ್‌ನಲ್ಲಿ ಹೂಡಿಕೆ ಮಾಡಿ ಹೆಚ್ಚಿನ ಹಣ ಗಳಿಸುವಂತೆ ಆಮಿಷ ಒಡ್ಡಲಾಗುತ್ತಿತ್ತು. ಇದನ್ನು ನಂಬಿ ಉದ್ಯಮಿಯೊಬ್ಬರು 20 ಲಕ್ಷ ರೂ. ಹೂಡಿಕೆ ಮಾಡಿದ್ದಾರೆ. ನಂತರ ವಂಚನೆಯಾಗಿರುವುದು ತಿಳಿದು ಡೆಹರಾಡೂನ್ ಪೊಲೀಸ್ ಠಾಣೆಯಲ್ಲಿ ಅಕ್ಟೋಬರ್ 4ರಂದು ದೂರು ದಾಖಲಿಸಿದ್ದಾರೆ.

ಮನೆಯಲ್ಲಿ ಕುಳಿತೇ ಸಂಪಾದಿಸಿ ಎಂಬ ಹೆಸರಿನಲ್ಲಿ ಶರ್ಮಾ ಮತ್ತಿತರರು ಆನ್‌ಲೈನ್ ಮೂಲಕ ಜನರನ್ನು ವಂಚಿಸುತ್ತಿದ್ದರು. ವೆಬ್ ಸೈಟ್ ರಿವ್ಯೂ, ಯುಟ್ಯೂಬ್ ಲೈಕ್ ಇತ್ಯಾದಿ ಹೆಸರಿನಲ್ಲಿ ವಂಚಿಸುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಈ ವಂಚನೆಯ ಸೂತ್ರಧಾರಿಗಳು ಚೀನಾ, ಹಾಂಕಾಂಗ್, ದುಬೈ ಮತ್ತು ಸಿಂಗಪುರಗಳಲ್ಲಿದ್ದಾರೆ. ಇವರು ಭಾರತದಲ್ಲಿ ಜನರನ್ನು ಏಜೆಂಟರಾಗಿ ನೇಮಿಸಿಕೊಂಡು ವಂಚನೆಯ ಜಾಲ ಹರಡಿದ್ದಾರೆ. ಹವಾಲಾ ಹಾಗೂ ಕ್ರಿಪ್ಟೋ ಕರೆನ್ಸಿ ಮೂಲಕ ಹಣ ಪಡೆಯುತ್ತಿದ್ದಾರೆ ಎಂದು ಪೊಲೀಸರು ಹೇಳಿದ್ದಾರೆ.

# ಜಗಳೂರಿನಲ್ಲಿ ಕಟ್ಟಡ ಕಾರ್ಮಿಕರ ಪ್ರತಿಭಟನೆ




ಜಗಳೂರು, ನ. 3- ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಎಐಟಿಯುಸಿ ನೇತೃತ್ವದಲ್ಲಿ ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಮತ್ತು ಕಲ್ಲು ಒಡೆಯುವ ಕ್ವಾರಿ ಕಾರ್ಮಿಕರ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿ, ತಹಶೀಲ್ದಾರ್ ಸೈಯ್ಯದ್ ಕಲೀಮುಲ್ಲಾ ಅವರಿಗೆ ಮನವಿ ಸಲ್ಲಿಸಿದರು.

ಎಐಟಿಯುಸಿ ಗೌರವ ಅಧ್ಯಕ್ಷ ಮಹಮ್ಮದ್ ಭಾಷಾ ಮಾತನಾಡಿ, ಕಳೆದ ವರ್ಷ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಹಲವಾರು ರೀತಿಯ ಕಿಟ್, ಲ್ಯಾಪ್ ಟಾಪ್, ಟ್ಯಾಬ್, ಶಾಲಾ ಕಿಟ್, ಆರೋಗ್ಯ ತಪಾಸಣೆ, ಇತರೆ ತರಬೇತಿ ಹೆಸರಿನಲ್ಲಿ ಕಾರ್ಮಿಕರು ದುಡಿದ ಹಣದ ಸೆಸ್ ಹಣವನ್ನು ಆಡಳಿತ ಬಿಜೆಪಿ ಸರ್ಕಾರ ಸಾಕಷ್ಟು ದುಂದು ವೆಚ್ಚ ಮಾಡಿದೆ ಎಂದು ಆರೋಪಿಸಿದರು.

ಆರೋಗ್ಯ ಇಲಾಖೆಯಿಂದ ಉಚಿತ ತಪಾಸಣೆ ನಡೆಸಬೇಕು. ಬೋಗಸ್ ಕಾರ್ಡ್ ತಡೆಯಲು ಕ್ರಮ ಕೈಗೊಳ್ಳಬೇಕು. ಕಾರ್ಮಿಕರ ಸಮಸ್ಯೆಯನ್ನು ಪರಿಹರಿಸಲು ಭಾರತ ದೇಶದ ಅತ್ಯಂತ ಹಿರಿಯ ಕಾರ್ಮಿಕ ಸಂಘಟನೆ ಎಐಟಿಯುಸಿಗೆ ಮಂಡಳಿಯಲ್ಲಿ ಖಾಯಂ ಸದಸ್ಯತ್ವ ನೀಡಬೇಕು ಎಂದು ಒತ್ತಾಯಿಸಿದರು.

ಎಐಟಿಯುಸಿ ಪ್ರಧಾನ ಕಾರ್ಯದರ್ಶಿ ಮಾದಿಹಳ್ಳಿ ಮಂಜುನಾಥ್ ಮಾತನಾಡಿ, ಬಾಕಿ ಇರುವ ಸುಮಾರು 14 ಲಕ್ಷ ಕಾರ್ಮಿಕರ ಮಕ್ಕಳ ಶೈಕ್ಷಣಿಕ ಸಹಾಯಧನವನ್ನು ಕೂಡಲೇ ವಿಲೇವಾರಿ ಮಾಡದಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ. ಕಟ್ಟಡ ಕಾರ್ಮಿಕರ ಕಲ್ಯಾಣಕ್ಕಾಗಿ ಸರ್ಕಾರ ಗಮನಹರಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಕಟ್ಟಡ ಕಟ್ಟುವ ಕಾರ್ಮಿಕರ ಸಂಘದ ತಾಲ್ಲೂಕು ಅಧ್ಯಕ್ಷ ವೀರಣ್ಣ, ಪ್ರಧಾನ ಕಾರ್ಯದರ್ಶಿ ಗೊಲ್ಲರಹಟ್ಟಿ ತಿಪ್ಪೇಸ್ವಾಮಿ, ಮುಖಂಡರಾದ ಯೋಗೇಶ್, ದೇವಿಕೆರೆ ಮಧು, ಬಸವರಾಜ್, ಶಿವಮೂರ್ತಿ, ಪಂಪಾಪತಿ, ಗುರು, ಶೇಖರಪ್ಪ, ಅಜ್ಜಪ್ಪ, ಮಂಜುಳಾ ಮತ್ತಿತರರು ಉಪಸ್ಥಿತರಿದ್ದರು.

# ಕಾಂತರಾಜ್ ವರದಿಗೆ ಬಿಜೆಪಿ ವಿರೋಧ

**(1ನೇ ಪುಟದಿಂದ)** ಕರೆಸಿಕೊಂಡ ಕೇಂದ್ರ ಗೃಹ ಸಚಿವ ಅಮಿತ್ ಷಾ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ರಾಜ್ಯ ನಾಯಕರೊಂದಿಗೆ ಈ ಸಂಬಂಧ ಸುದೀರ್ಘ ಚರ್ಚೆ ನಡೆಸಿ ವರದಿಯನ್ನು ವಿರೋಧಿಸುವಂತೆ ಆದೇಶ ಮಾಡಿ ಕಳುಹಿಸಿದ್ದಾರೆ.

ದೆಹಲಿಯಲ್ಲಿ ಬಿಜೆಪಿ ನಾಯಕರು ಸಭೆ ನಡೆಸುತ್ತಿದ್ದ ಸಮಯದಲ್ಲೇ ರಾಜ್ಯ ಒಕ್ಕಲಿಗರ ಸಂಘ ಸಮುದಾಯದ ಮಠಾಧೀಶರ ಸಮ್ಮುಖದಲ್ಲಿ ಜನಪ್ರತಿನಿಧಿಗಳ ಸಭೆ ನಡೆಸಿ ಕಾಂತರಾಜ್ ವರದಿಗೆ ವಿರೋಧ ವ್ಯಕ್ತಪಡಿಸಿದ್ದಾರೆ.

ದೆಹಲಿಯಿಂದ ಹಿಂದಿರುಗುತ್ತಿದ್ದಂತೆ ಈಶ್ವರಪ್ಪ ಸುದ್ದಿಗಾರರೊಂದಿಗೆ ಮಾತನಾಡಿ, ಕಾಂತರಾಜ್ ವರದಿ ಸ್ವೀಕರಿಸಿದ ದಿನವೇ ಸಿದ್ದರಾಮಯ್ಯ ಅಧಿಕಾರ ಕಳೆದುಕೊಳ್ಳುತ್ತಾರೆ ಎಂದು ತಿಳಿಸಿದ್ದಾರೆ. ವರದಿಯನ್ನು ಬೆಂಕಿಗೆ ಹಾಕಿ, ಅದನ್ನು ಒಪ್ಪಲು ಸಾಧ್ಯವಿಲ್ಲ, ನಾನು ಮುಖ್ಯ ಮಂತ್ರಿ ಅವರಿಗೆ ಕಿವಿಮಾತು ಹೇಳುತ್ತೇನೆ, ಜಾತಿ-ಜಾತಿ ನಡುವೆ ಸಂಘರ್ಷ ಹುಟ್ಟುಹಾಕುವ ಇಂತಹ ವರದಿಗೆ ಆಸ್ಪದ ಕೊಡಬೇಡಿ ಎಂದಿದ್ದಾರೆ.

ಕಳೆದ 8 ವರ್ಷಗಳ ಹಿಂದೆ ಅವೈಜ್ಞಾನಿಕವಾಗಿ ಸಿದ್ಧಗೊಂಡಿರುವ ವರದಿಗೆ ಕಾರ್ಯದರ್ಶಿಗಳ ಸಹಿಯೇ ಇಲ್ಲ, ಅಂತಹ ಸಮೀಕ್ಷೆಯನ್ನು ಒಪ್ಪಲು ಸಾಧ್ಯವಿಲ್ಲ. ನಾನೂ ಹಿಂದುಳಿದ ವರ್ಗಕ್ಕೆ ಸೇರಿದವನೇ. ಈ ವರದಿಯಿಂದ ಯಾವ ವರ್ಗಕ್ಕೂ ಲಾಭವಾಗುವುದಿಲ್ಲ. ಅಪ್ಪ-ಅಮ್ಮ ಇಲ್ಲದ ಕೂಸನ್ನು ಬೀದಿಗೆ ತಂದು ಬೆಂಕಿ ಹಚ್ಚಬೇಡಿ, ಅದರ ಬದಲು ವರದಿಯನ್ನೇ ಸುಟ್ಟುಹಾಕಿ ಎಂದು ಖಾರವಾಗಿ ತಿಳಿಸಿದ್ದಾರೆ.

ಸಿದ್ದರಾಮಯ್ಯ ಹಿಂದುಳಿದ ವರ್ಗಗಳ ಚಾಂಪಿಯನ್ ಎಂದು ಬಿಂಬಿಸಿಕೊಳ್ಳಲು ಅವೈಜ್ಞಾನಿಕ ವರದಿಗೆ ಜೀವ ತುಂಬಲು ಹೊರಟಿದ್ದಾರೆ.

ಈ ವರದಿಗೆ ಒಕ್ಕಲಿಗ ಮತ್ತು ಲಿಂಗಾಯತ ಸಮುದಾಯದ ಸಂಘಟನೆಗಳು ಮತ್ತು ಮುಖಂಡರು ಈಗಾಗಲೇ ವಿರೋಧ ವ್ಯಕ್ತಪಡಿಸಿ ಯಾವುದೇ ಕಾರಣಕ್ಕೂ ಅನುಷ್ಠಾನಗೊಳಿಸಬಾರದೆಂದು ಮನವಿ ಮಾಡಿದ್ದಾರೆ.

ಕರ್ನಾಟಕದ ಪ್ರಮುಖ ಸಮುದಾಯಗಳ ವಿರೋಧ ವ್ಯಕ್ತಪಡಿಸಿರುವುದನ್ನೇ ಬಿಜೆಪಿ ರಾಜಕೀಯ ವಾಗಿ ಬಳಸಿಕೊಳ್ಳಲು ಹೊರಟಿದ್ದು, ಕಾಂತರಾಜ್ ವರದಿಗೆ ನೇರವಾಗಿಯೇ ವಿರೋಧ ವ್ಯಕ್ತಪಡಿಸಿದೆ. ಇದಕ್ಕೂ ಮೊದಲು ವರದಿ ಅನುಷ್ಠಾನಗೊಳಿಸುವಂತೆ ಪಕ್ಷದ ಹಿರಿಯ ನಾಯಕ ಹಾಗೂ ಮಾಜಿ ಸಚಿವ ಕೋಟಾ ಶ್ರೀನಿವಾಸ ಪೂಜಾರಿ, ಸಂಸದ ಪಿ.ಸಿ ಮೋಹನ್ ಎಲ್ಲರೂ ಒತ್ತಾಯಿಸಿದ್ದರು.

ನಿನ್ನೆ ದೆಹಲಿಯಲ್ಲಿ ನಡೆದ ಸಭೆಯಿಂದ ಹಿಂದಿರುಗುತ್ತಿದ್ದಂತೆ, ವರದಿಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಅಷ್ಟೇ ಅಲ್ಲದೆ, ಬಹುಸಂಖ್ಯಾತರ ವಿರುದ್ಧವಾಗಿ ವರದಿ ಸ್ವೀಕರಿಸಿದ್ದೇ ಆದರೆ, ಬೀದಿಗೆ ಇಳಿದು ಹೋರಾಟ ಮಾಡಬೇಕಾಗುತ್ತದೆ ಮತ್ತು ಸರ್ಕಾರ ಪತನಗೊಳಿಸಲು ಸಮುದಾಯಗಳು ಒಂದಾಗಿ ಸಂಘರ್ಷಕ್ಕೆ ಇಳಿಯಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ.

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್‌ಕಾಲೋನಿ ಉತ್ತರ 40x60 (ಅಕ್ಕ-ಪಕ್ಕ) (40 ಅಡಿ ರಸ್ತೆ + ಡಬಲ್ ರೋಡ್) ಶಿವ-ಪಾರ್ವತಿ ಬಡಾವಣೆ ಪೂರ್ವ 30x40, 30x65, 40x60, ಪಶ್ಚಿಮ 30x55, ಜೆ.ಹೆಚ್. ಪಟೇಲ್ ಬಡಾವಣೆ ಪೂರ್ವ 50x100 ( 60 ಅಡಿ ರಸ್ತೆ)
ಐಗೂರು ವಿಜಯಕುಮಾರ
99457 02495

**ಕೆಲಸಗಾರರು ಬೇಕಾಗಿದ್ದಾರೆ**
ರಿಸೆಪ್ಷನಿಸ್ಟ್ ಮಹಿಳೆ-01 , ಮೆಕ್ಯಾನಿಕ್ (ದ್ವಿ-ಚಕ್ರ ವಾಹನಗಳ ಅನುಭವ)-01, (ಐ. ಟಿ. ಐ. ಆದವರಿಗೆ ಆದ್ಯತೆ) ಸೇಲ್ಸ್ ರೆಪ್ರೆಸೆಂಟೇಟಿವ್ಸ್ -01, ಸುಬ್ರಹ್ಮಣ್ಯ ಮೋಟಾರ್ಸ್ (ಹೋಂಡಾ) ಮಲೇಬೆನ್ನೂರು.
98866 18484
Mail:-subramanya.motors@ gmail.com

**ಬೇಕಾಗಿದ್ದಾರೆ**
ಎಲೆಕ್ಟ್ರಿಕಲ್ ದ್ವಿಚಕ್ರ ವಾಹನಗಳ ರಿಪೇರಿಗಾಗಿ ಎಲೆಕ್ಟ್ರೀಷಿಯನ್ ಬೇಕಾಗಿದ್ದಾರೆ. ವಿದ್ಯಾರ್ಹತೆ ಡಿಪ್ಲೋಮಾ / ITI Electrical
63666 35555

**ಮನೆ ಮಾರಾಟಕ್ಕಿದೆ**
ಹರಿಹರ ಪಟ್ಟಣದ ಹೈಸ್ಕೂಲ್ ಬಡಾವಣೆಯ 4ನೇ ಮೇನ್, 1ನೇ ಕ್ರಾಸ್‌ನಲ್ಲಿ ಶ್ರೀ ಗಿರಿಯಮ್ಮ ಕಾಲೇಜು ಎದುರು, 50X40 ಅಳತೆಯಲ್ಲಿರುವ ಎರಡು ಆರ್‌ಸಿಸಿ ಮನೆಗಳು, ಮನೆ ನಂ. 64 ಮತ್ತು 65 ಮಾರಾಟಕ್ಕಿರುತ್ತವೆ. ಆಸಕ್ತಿಯುಳ್ಳವರು ಶ್ರೀ ಜಿ.ಹೆಚ್. ಮಂಜುನಾಥ,
88849 62111

**ಮನೆಗಳು ಮಾರಾಟಕ್ಕಿವೆ**
ಎಸ್.ಎಸ್. ಬಿ 30x40 ಉತ್ತರ ಹೊಸ ಮನೆ ಇದೆ. 30x50 ಪಶ್ಚಿಮ ಹೊಸದು. ಎಸ್.ಎಸ್. ಬಿ ಬ್ಲಾಕ್, 30x62 ಪಶ್ಚಿಮ, ತರಳಬಾಳು ಮನೆ, 40x50 ಉತ್ತರ, ಎಂಸಿಸಿ ಬಿ ಬ್ಲಾಕ್ ಮನೆ ಇದೆ.
ಏಜೆಂಟರು ಎಸ್. ಯಲ್ಲೋಜಿರಾವ್
97418 11694

**2 BHK ಮನೆ ಬಾಡಿಗೆಗಿದೆ**
ಶಾಮನೂರು ಆಂಜನೇಯ ಸ್ವಾಮಿ ದೇವಸ್ಥಾನದ ಹಿಂದಿನ ರಸ್ತೆಯಲ್ಲಿ 2 BHK ಮನೆ ಹಾಗೂ ಸಿಂಗಲ್ ರೂಂ ಬಾಡಿಗೆಗೆ ಇದೆ. ಸಂಪರ್ಕಿಸಿ :
98864-42434, 80885-88246
(ಸಸ್ಯಹಾರಿಗಳಿಗೆ ಮಾತ್ರ)

**ಮಳಿಗೆ ಬಾಡಿಗೆಗೆ ಇದೆ**
ಕೆ.ಬಿ. ಬಡಾವಣೆ ಲಾಯರ್ ರಸ್ತೆಯಲ್ಲಿ ಮೊದಲನೆಯ ಮಹಡಿಯಲ್ಲಿ 40x44 ಅಡಿ ಅಳತೆಯ, ಫರ್ನಿಚರ್ ಸಮೇತ ಎ.ಸಿ. ಸೌಲಭ್ಯವಿರುವ LIC ಆಫೀಸ್ ಮತ್ತು ಬ್ಯಾಂಕ್‌ಗೆ ಅನುಕೂಲವಾದ ಮಳಿಗೆ ಬಾಡಿಗೆಗಿದೆ. ವಿಚಾರಿಸಿ.
ಮೊ : 88928 44854

**ಮನೆಗಳು ಮಾರಾಟಕ್ಕಿವೆ**
S.S 'B' Block ದಕ್ಷಿಣ 30x40 (ಡೂಪ್ಲೆಕ್ಸ್) ಪಟೇಲ್ ಬಡಾವಣೆ ಪಶ್ಚಿಮ 30x45 (ಡೂಪ್ಲೆಕ್ಸ್) ಉತ್ತರ 30x50 (ಮೇಲೆ ಸಿಂಗಲ್ ಅಟ್ಯಾಚ್ ರೂಮ್ ) ತರಳಬಾಳು ಬಡಾವಣೆ ದಕ್ಷಿಣ 30x60 (ಡೂಪ್ಲೆಕ್ಸ್)
ಐಗೂರು ವಿಜಯಕುಮಾರ
99457 02495

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು.
99863 61250
80730 24690

**ಸೈಟುಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿ 30x50 ಹಳೆಯ ರಶ್ಮಿ ಹಾಸ್ಟೆಲ್ ಹತ್ತಿರ, 30x60 ಪೂರ್ವ ಮತ್ತು ಪಶ್ಚಿಮ 44x60 ಪೂರ್ವ ಮತ್ತು ಎಂಸಿಸಿ ಎ ಬ್ಲಾಕ್ 40x63 ಪೂರ್ವ ಬಸವೇಶ್ವರ. 50x100 ಗೋಡೌನ್ ಬಾಡಿಗೆಗೆ. ಕರೂರು ಇಂಡಸ್ಟ್ರೀಯಲ್ ಏರಿಯಾ.
ಏಜೆಂಟರು ಎಸ್. ಯಲ್ಲೋಜಿರಾವ್
97418 11694

**RICH BROTHER Academy**
Part Time Earning Opportunity
82170 78924, 80737 59374

**REQUIRED**
Nursery Teacher
Fluent in English
Contact :
78999 00333

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೆಣ್ಣೆ ದೋಸೆ ಹಾಕಲು ಬೇಕಾಗಿದ್ದಾರೆ**
ಅನುಭವವಿರುವವರಿಗೆ ಆದ್ಯತೆ. ಆಕರ್ಷಕ ಸಂಬಳ ಮತ್ತು ವಸತಿ ನೀಡಲಾಗುವುದು.
8095152143

**HOTEL FOR RENT**
District 17 Hotel, Vidyanagar Service Road.
Available for rent.
95353 01995, 97319 99918

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್ಸ್ ಮತ್ತು ರೂಮ್ ಬಾಯ್ ಬೇಕಾಗಿದ್ದಾರೆ, ಕೆಲವು ಕಡೆ ಊಟ ಮತ್ತು ವಸತಿ ವ್ಯವಸ್ಥೆಯಿರುತ್ತದೆ, ಕೂಡಲೇ ಸಂಪರ್ಕಿಸಿ :
74113 07071
82177 93007

**ಜಮೀನು ಮಾರಾಟಕ್ಕಿದೆ**
ಅರಸಾಪುರ 2 ಎಕರೆ ಇದೆ. ಬಾತಿ ಮಂದಾರ ಶಾಲೆ ಹತ್ತಿರ 1 ಎಕರೆ 3 ಗುಂಟೆ, ಹೊಸ ಬಾತಿ, ಹಳೇ ಬಾತಿಯ ಹತ್ತಿರ 4 ಎಕರೆ 20 ಗುಂಟೆ ಇದೆ. ಅಡಿಕೆ ತೋಟಗಳು ಇವೆ.
ಏಜೆಂಟರು ಎಸ್. ಯಲ್ಲೋಜಿರಾವ್
97418 11694

**ತಕ್ಷಣ ಬೇಕಾಗಿದ್ದಾರೆ**
ಟೈಲರಿಂಗ್ ಮಹಿಳೆಯರು ಸಹಾಯಕರು, ಆಫೀಸ್ ಕೆಲಸಕ್ಕೆ ಮಹಿಳೆ ತಕ್ಷಣ ಬೇಕಾಗಿದ್ದಾರೆ.
79751 07268

**ಶಿಕ್ಷಕಿ/ಆಯಾ ಬೇಕಾಗಿದ್ದಾರೆ**
1) NTC/DEd/BEd/ Degree -01
2)Helper women (ಆಯಾ ಮಹಿಳೆ )-01
ನಿಸರ್ಗ ಪ್ರಾಥಮಿಕ ಹಾಗೂ ಪ್ರೌಢಶಾಲೆ 'C' ಬ್ಲಾಕ್, SOG ಬಡಾವಣೆ, ಇಂಡಸ್ಟ್ರಿಯಲ್ ಏರಿಯಾ, ದಾವಣಗೆರೆ.
87927 02690
99862 26454, 98444 43374

**ಎಲ್ಲಾ ತರಹದ ಟೆಂಡರ್‌ಗಳು ಬಿಡ್ ಮಾಡಿಕೊಡಲಾಗುವುದು**
ಶ್ರೀ ಹುಲಿಗಿ ಕನ್‌ಸ್ಟ್ರಕ್ಷನ್
ಕೇಂದ್ರ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದಿಂದ ಬರುವ ಎಲ್ಲಾ ತರಹದ ಟೆಂಡರ್‌ಗಳು ಬಿಡ್ ಮಾಡಿಕೊಡಲಾಗುತ್ತದೆ.
ಮಂಜುನಾಥ
99009 55173

**SECURITY GUARD ಬೇಕಾಗಿದ್ದಾರೆ**
ಉತ್ತಮ ವೇತನ
70012 87756, 97409 77785

**ಬೇಕಾಗಿದ್ದಾರೆ**
Spinal cord injury patient ಗೆ ವ್ಯಾಯಾಮ ಮಾಡಿಸುವವರು ಬೇಕಾಗಿದ್ದಾರೆ. ತಿಂಗಳಿಗೆ 10,000 ರೂ. ಪ್ರತಿ ದಿನ 2 ಗಂಟೆ
94488 35203

**ಅಡುಗೆ ಭಟ್ಟರು ಬೇಕಾಗಿದ್ದಾರೆ**
ಪ್ರತಿದಿನ 200 ಜನರಿಗೆ ಸಸ್ಯಹಾರಿ ಊಟ ತಯಾರಿಸಲು ಅಡುಗೆ ಭಟ್ಟರು ಬೇಕಾಗಿದ್ದಾರೆ. ಸಂಪರ್ಕಿಸಿ :
99643 75596, 82770 44313

**CCTV ಫಿಟ್ಟಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ**
ಶಿಕ್ಷಣ ಅರ್ಹತೆ ಇರುವುದಿಲ್ಲ, ಅನುಭವ ಮುಖ್ಯ, ಉತ್ತಮವಾದ ಸಂಬಳ ಕೊಡಲಾಗುವುದು.
98447 57474

**ಸಾಕಲು ಬೆಕ್ಕಿನ ಮರಿ ಬೇಕಾದರೆ ಕರೆ ಮಾಡಿ**
96864 62502, 63635 52021

**IMMEDIATELY WANTED LADY TEACHERS**
BA., BEd., Social Science - 2, BA., BEd., Hindi - 2, B.Sc B.Ed - 2
Attractive Salary will be given right & experienced candidates only
95356 10817

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ದಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು / ಹುಡುಗಿಯರು ಬೇಕಾಗಿದ್ದಾರೆ. ಪಿಯುಸಿ ಅಥವಾ ಯಾವುದೇ ಪದವಿ ಆಗಿರಬೇಕು.
ಕಾವೇರಿ ಮೆಡಿಹೌಸ್ ಪ್ರೈ.ಲಿ.,
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ - 2.

**ಸೈಟುಗಳು ಮಾರಾಟಕ್ಕಿವೆ**
1) ಡಾಲರ್ಸ್ ಕಾಲೋನಿ (40x51) ಪಶ್ಚಿಮ
2) ಕುಂದುವಾಡ ಸೈ. ನಂ. 44 (30x50) ಪಶ್ಚಿಮ, ನೈರುತ್ಯ ಮೂಲೆ
3) ಕುಂದುವಾಡ ಸೈಟ್ ನಂ. 43 (30x50) ಪಶ್ಚಿಮ (ಅಕ್ಕ-ಪಕ್ಕ)
97404 47907

**TO LET**
2 BHK House for Lease
Doggalli Compound, Near LIC Office, K.R. Road, Davangere.
94483 76399

**ಸೈಟ್, ಮನೆ, ಹೊಲ ಬೇಕಾದಲ್ಲಿ ಸಂಪರ್ಕಿಸಿ.**
ಸರ್ಕಾರಿ ನೌಕರರ ಬಡಾವಣೆಯಲ್ಲಿ ಬಿ ಬ್ಲಾಕ್ 30x50 ಪೂರ್ವ, 30x40 ಪೂರ್ವ, 30x40 ಪಶ್ಚಿಮ, ಗ್ಲಾಸ್ ಹೌಸ್ ಹತ್ತಿರ ದಕ್ಷಿಣ 30x40, ಉತ್ತರ 30x50. ಎಸ್. ಎಸ್. ಬಡಾವಣೆಯ ಬಿ ಬ್ಲಾಕ್‌ನಲ್ಲಿ 40x60 ದಕ್ಷಿಣ, ಶ್ರೀ ಸಾಮಾನ್ಯದಲ್ಲಿ 30x43, ಉತ್ತರ ಬೈಪಾಸ್ ಸರ್ವೀಸ್ ರಸ್ತೆಗೆ ಕುಬೇರ ಹೋಟೆಲ್ ಹತ್ತಿರ 30x55 ದಕ್ಷಿಣ (ಕಮರ್ಷಿಯಲ್) ಸೈಟ್ ಮಾರಾಟಕ್ಕೆ ಇದೆ.
- ಸಂಪರ್ಕಿಸಿ. ಸುರೇಶ್ ಪಿ.ಎಸ್. ಶಾಮನೂರು
84314 00907

**ರೂಂ ಬಾಡಿಗೆಗಿದೆ**
ಸಿಂಗಲ್ ಅಟ್ಯಾಚ್ಡ್ ರೂಂ ಮೊದಲನೇ ಮಹಡಿಯಲ್ಲಿ ಹಾಗೂ ಬೋರ್ ಮತ್ತು ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ರೂಂ ಬಾಡಿಗೆಗೆ ಇದೆ. ನಂ. 651, ಕಟೀಲು, 6ನೇ ಕ್ರಾಸ್ ಹದಡಿ ರಸ್ತೆ, ಶ್ರೀನಿವಾಸ ನಗರ, ದಾವಣಗೆರೆ.
70194 27951, 93410 14488

**Duty Doctor ಬೇಕಾಗಿದ್ದಾರೆ**
BAMS or MBBS
Contact :
63628 55223

**LADIES PG BUILDING FOR RENT**
ಸುಸಜ್ಜಿತವಾದ ಮಹಿಳಾ ವಸತಿ ನಿಲಯ ಬಾಡಿಗೆಗಿದೆ.
ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.
Mob : 95351 14063, 96203 71544, 97428 35642

**ಕೆಲಸಗಾರರು ಬೇಕಾಗಿದ್ದಾರೆ**
ಪ್ರತಿಷ್ಠಿತ ಕಂಪನಿಯಲ್ಲಿ ಕೆಲಸಕ್ಕೆ ನುರಿತ AC, Ref, TV, Washing Machine Technician ಬೇಕಾಗಿದ್ದಾರೆ. ಸಂಬಳ +ಇನ್ಸೆಂಟಿವ್ಸ್ ನೀಡುತ್ತೇವೆ. ಸಿಸ್ಟಂ ವರ್ಕ್‌ಗೆ ಲೇಡಿ ಬೇಕಾಗಿದ್ದಾರೆ.
98805 31599

**WANTED**
S.V. Marketing Davangere
Marketing Executive
Above than 3 years experience. No age bar.
94480 46571, 78993 37571

**ಕೆಲಸ ಖಾಲಿ ಇದೆ**
ಹೋಲ್‌ಸೇಲ್ ಫಾರ್ಮಾದಲ್ಲಿ ಸೇಲ್ಸ್ ಮತ್ತು ಮ್ಯಾನೇಜ್‌ಮೆಂಟ್ ಕೆಲಸ ಖಾಲಿ ಇದೆ. ಸಂಪರ್ಕಿಸಿ :
74066 59695
94499 98238

**WANTED**
ಅನು ಏಜೆನ್ಸಿ
ಟೆಲಿಕಾಲರ್ಸ್ - 20,
ಉತ್ತಮ ವೇತನ ನೀಡಲಾಗುವುದು. ನಮ್ಮಲ್ಲಿ ಇ-ಸ್ವತ್ತು, ಇ-ಖಾತೆ ಮಾಡಿಕೊಡಲಾಗುವುದು. ಸಂಪರ್ಕಿಸಿ.
97424 48252, 74835 71646

**Looking for the TUTION PARTNER**
for 10th, PUC We Looking for a Business Partner.
2nd floor, #900/D3, SS Complex, behind B Yogi reddy Building, Hi-tech Hospital Road, jayanagara B Block, Davanagere, Karnataka-577005.
+91 8217078924

**ಖಾಲಿ ನಿವೇಶನ ಬಾಡಿಗೆಗೆ**
ತರಳಬಾಳು ಬಡಾವಣೆ ವಿದ್ಯಾನಗರ, 2ನೇ ಬಸ್ ನಿಲ್ದಾಣದಿಂದ ವಾಣಿ ರೈಸ್‌ಮಿಲ್‌ಗೆ ಸಂಪರ್ಕ ಕಲ್ಪಿಸುವ 8ನೇ ಕ್ರಾಸ್ ರಸ್ತೆಯಲ್ಲಿ 60x90 ಅಳತೆಯ ಕಾರ್ನರ್ ನಿವೇಶನ (ಮಾಗನೂರು ಬಸಪ್ಪ ಶಾಲೆಯ ತಿರುವಿಗೆ ಹೊಂದಿಕೊಂಡಿರುವ ಪಾರ್ಕ್ ಎದುರು) ರೆಸ್ಟೋರೆಂಟ್, ಗೋಡೌನ್ ಅಥವಾ ಇತರೆ ವಹಿವಾಟಿಗೆ ನೆಲ ಬಾಡಿಗೆಗೆ ಲಭ್ಯವಿದೆ. ದಲ್ಲಾಳಿಗಳಿಗೆ ಅವಕಾಶವಿಲ್ಲ.
94482 44707

**FOR RENT**
1st Floor Hall Size = 28x43, Commercial Office Space.
MCC `B' Block, Boys Hostel Road, 7th Cross, 9th Main. Contact :
82177 72482

**ಬೇಕಾಗಿದ್ದಾರೆ**
ಸರ್ವೀಸ್ ಅಡ್ವೈಸರ್ ಅನುಭವವುಳ್ಳವರು ಮತ್ತು ಟೆಕ್ನೀಷಿಯನ್ ಬೇಕಾಗಿದ್ದಾರೆ.
Salary + Incentive
ESI, PF ಒಳಗೊಂಡಿರುತ್ತದೆ.
ಶ್ರೀನಿವಾಸ ಹೊಂಡಾ
99166 31266

**JOBS**
ಯಾವುದೇ ಡಿಗ್ರಿವುಳ್ಳ ಯುವತಿಯರು ಬೇಕಾಗಿದ್ದಾರೆ. ಅಡ್ಮಿನ್, ಪಾರ್ಟ್ ಟೈಂ / ಫುಲ್ ಟೈಂ ಮತ್ತು ಡಿಗ್ರಿ ಆಗಿರುವ ಹುಡುಗರು ಸೇಲ್ಸ್‌ಗೆ ಬೇಕಾಗಿದ್ದಾರೆ.
ಸಂಪರ್ಕಿಸಿ. ಎಸ್.ಬಿ.ಪಿ. ಫಾರ್ಮಾ
84310 22744

**WANTED**
Fresher's & Learner's Required for Auditor Office
Contact :
77607 40760

**ಮನೆ ಬಾಡಿಗೆಗಿದೆ**
ಗ್ರೌಂಡ್ ಫ್ಲೋರ್ 2 BHK ಪಶ್ಚಿಮ ದಿಕ್ಕಿನ ಹಾಗೂ ಬೋರ್ ಮತ್ತು ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ಮನೆ ಬಾಡಿಗೆಗಿದೆ. ನಂ. 576. ಸತ್ಯ ನಿವಾಸ, 1 ನೇ ಕ್ರಾಸ್, 4ನೇ ಮೇನ್ 'ಎ' ಬ್ಲಾಕ್, ಡಿ.ಸಿ.ಎಂ. ಟೌನ್ ಶಿಪ್, ಇಂಡಿಯಾ ಓನ್ ಎ ಟಿ ಎಂ ಹತ್ತಿರ, ದಾವಣಗೆರೆ.
7019427951, 934101 4488
(ಸಸ್ಯಹಾರಿಗಳಿಗೆ ಮಾತ್ರ)

**ವಧು ಬೇಕಾಗಿದೆ**
36 ವರ್ಷದ ಆಸ್ತಿ, ಜಮೀನು ಹೊಂದಿರುವ ಸಾಧು ಲಿಂಗಾಯತ ವರನಿಗೆ ಲಿಂಗಾಯತ ವಧು ಬೇಕಾಗಿದೆ.
74835 71646

# ಕನಿಷ್ಠ ಮಾನವೀಯತೆ ಇಲ್ಲದ ದುಷ್ಟ ಕಾಂಗ್ರೆಸ್ ಸರ್ಕಾರ : ಬಿಜೆಪಿ ರೈತ ಮೋರ್ಚಾ ಆರೋಪ



ದಾವಣಗೆರೆ, ಅ.3- ಬರದ ಸಂಕಷ್ಟ ಎದುರಿಸುತ್ತಿರುವ ಈ ಸಂದರ್ಭದಲ್ಲಿ ಬರ ಪರಿಹಾರದ ಕ್ರಮಗಳನ್ನು ಕೈಗೊಳ್ಳುವುದನ್ನು ಬಿಟ್ಟು ಕೇಂದ್ರದ ಮೇಲೆ ಆರೋಪ ಹೊರಿಸುತ್ತಾ, ರೈತರ-ಜನಸಾಮಾನ್ಯರ ಬವಣೆಯನ್ನು ಆಲಿಸಿ, ಸಂತೈಸುವ ಸೌಜನ್ಯತೆ ಮೆರೆದಿಲ್ಲ. ಕನಿಷ್ಠ ಮಾನವೀಯತೆ ಇಲ್ಲದ ದುಷ್ಟ ಸರ್ಕಾರ ಇದಾಗಿದೆ ಎಂದು ಬಿಜೆಪಿ ರೈತ ಮೋರ್ಚಾ ಆರೋಪಿಸಿದೆ.

ಜಿಲ್ಲಾಧಿಕಾರಿ ಕಚೇರಿಗೆ ಇಂದು ತೆರಳಿದ ಬಿಜೆಪಿ ನಿಯೋಗ ಹಲವಾರು ಬೇಡಿಕೆಗಳ ಮನವಿ ಸಲ್ಲಿಸಿತು. ರಾಜ್ಯ ಸರ್ಕಾರ ಭೀಕರ ಬರದಿಂದ ಹಾನಿಯಾಗಿರುವ ಬೆಳೆ ನಷ್ಟದ ಬಗ್ಗೆ ಸಮೀಕ್ಷೆ ನಡೆಸಬೇಕು. ಭೂಮಿ ಉಳಿಮೆ, ಬಿತ್ತನೆ ಬೀಜ, ರಸಗೊಬ್ಬರ, ಕೂಲಿ ವೆಚ್ಚ, ರೈತನ ಶ್ರಮ ಎಲ್ಲವನ್ನೂ ಲೆಕ್ಕ ಹಾಕಿ ಪ್ರತಿ ಎಕರೆಗೆ ಬೆಳೆ ನಷ್ಟದ ಪ್ರಮಾಣ ಆಂದಾಜಿಸಬೇಕು. ಜಿಲ್ಲೆಯಲ್ಲಿ ಪ್ರತಿ ಎಕರೆಗೆ ಪ್ರತಿ ಹಂಗಾಮಿಗೆ 30 ಸಾವಿರ ಪರಿಹಾರ ಕೊಡಬೇಕು.

ಬರದ ಹೊತ್ತಿನಲ್ಲಿ ದುಡಿಯುವ ಕೈಗಳಿಗೆ ಕೆಲಸ ಕೊಡಲು ಉದ್ಯೋಗ ಖಾತ್ರಿ ಯೋಜನೆಯಡಿ ಕೃಷಿ, ತೋಟಗಾರಿಕೆ, ಹೈನುಗಾರಿಕೆ ಸೇರಿದಂತೆ ವೈಯಕ್ತಿಕ ಕಾಮಗಾರಿಗಳಿಗೆ ಆದ್ಯತೆ ನೀಡಿ ತಾಲ್ಲೂಕುವಾರು ಮತ್ತು ಗ್ರಾಮ ಪಂಚಾಯಿತಿವಾರು ಗುರಿ ನಿಗದಿಪಡಿಸಬೇಕು. ಈ ಯೋಜನೆ ಅನುಷ್ಠಾನದಲ್ಲಿ ನಿಯಮಗಳನ್ನು ಸಡಿಲಗೊಳಿಸಿ, ಕಾಮಗಾರಿಗಳನ್ನು ತ್ವರಿತವಾಗಿ ಪ್ರಾರಂಭಿಸಬೇಕು. ವೈಯಕ್ತಿಕ ಕಾಮಗಾರಿಗಳಿಗೆ ಕುಟುಂಬದ ಯಾರಾದರೊಬ್ಬರು ಜಾಬ್ ಕಾರ್ಡ್ ಹೊಂದಿರಬೇಕು, ಮನರೇಗದಡಿಯಲ್ಲಿ ಈ ಹಿಂದೆ ಕೆಲಸ ಮಾಡಿರಬೇಕು, ಸಣ್ಣ, ಅತಿ ಸಣ್ಣ ರೈತರಾಗಿರಬೇಕು ಎಂಬ ನಿಯಮಗಳನ್ನು ಸಡಿಲಗೊಳಿಸಬೇಕು.

ಬೆಳೆ ಇಲ್ಲದೇ ಮೇವಿನ ಕೊರತೆಯಿಂದ ಹಾಲಿನ ಉತ್ಪಾದನೆ ಕ್ಷೀಣವಾಗಿದೆ. ಇದರಿಂದಾಗಿ ಹೈನೋದ್ಯಮಕ್ಕೆ ತೀವ್ರ ಪೆಟ್ಟು ಬಿದ್ದಿದ್ದು, ಇದರ ನಷ್ಟದ ಪ್ರಮಾಣವನ್ನು ಪ್ರತ್ಯೇಕವಾಗಿ ಅಂದಾಜಿಸಿ ಹೈನುಗಾರಿಕೆ, ಕುರಿ, ಕೋಳಿ ಸಾಕಾಣಿಕೆಯಲ್ಲಿ ನಿರತರಾಗಿರುವ ರೈತರಿಗೆ ಪ್ರತ್ಯೇಕವಾಗಿ ಪರಿಹಾರ ನೀಡಬೇಕು.

ಮೊದಲೇ ನೀರಿನ ಬರ ಅದರ ಜೊತೆಗೆ ವಿದ್ಯುತ್ ಅಭಾವ ಮತ್ತು ಕಣ್ಣು ಮುಚ್ಚಾಲೆ ಯಿಂದ ರೈತರ ಬದುಕು ಹೈರಾಣಾಗಿದೆ. 2 ವಾರದ ಹಿಂದೆಯೇ ರೈತರಿಗೆ ನಿರಂತರ 5 ತಾಸು ತ್ರೀಫೇಸ್ ವಿದ್ಯುತ್ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಕಟ್ಟುನಿಟ್ಟಾಗಿ ಅಧಿಕಾರಿಗಳಿಗೆ ಸೂಚಿಸಿದ್ದರೂ, ರೈತರ ಬವಣೆ ತಪ್ಪಿಲ್ಲ. ಈ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು.

ನಿಯೋಗದಲ್ಲಿ ಜಿಲ್ಲಾ ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಲೋಕಿಕೆರೆ ನಾಗರಾಜ್, ಬಿಜೆಪಿ ಮುಖಂಡರಾದ ಕೊಳೇನಹಳ್ಳಿ ಬಿ.ಎಂ ಸತೀಶ್, ಧನಂಜಯ ಕಡ್ಲೇಬಾಳು, ಬಾತಿ ರೇವಣಸಿದ್ದಪ್ಪ, ಬಿ.ಕೆ.ಶಿವಕುಮಾರ್, ಹೆಬ್ಬಾಳು ಮಹೇಂದ್ರ, ಕುಂದುವಾಡದ ಗಣೇಶಪ್ಪ, ಕುಂದುವಾಡದ ಪುನೀತ್ ಆರುಂಡಿ, ಅಣಬೇರು ಶಿವಪ್ರಕಾಶ್, ಅಥಿತ್ ಅಂಬರ್‌ಕರ್, ವಾಸನ ಬಸವರಾಜ, ಕಡ್ಲೇಬಾಳು ಬಿ.ಎಲ್.ಚಂದ್ರು ಮತ್ತಿತರರು ಭಾಗವಹಿಸಿದ್ದರು.

# ಗಣಪತಿಯನ್ನು ಪೂಜಿಸುವ ಸಂಸ್ಕೃತಿ ನಮ್ಮದಲ್ಲ : ಸಾಣೇಹಳ್ಳಿ ಶ್ರೀ



ಸಾಣೇಹಳ್ಳಿ, ನ.3- ಗಣಪತಿಯನ್ನು ಪೂಜಿಸುವ ಸಂಸ್ಕೃತಿ ನಮ್ಮದಲ್ಲ. ಪ್ರಾರ್ಥನೆ ಎಂದಾಗ ಗಣಪತಿಯನ್ನು ಪ್ರಾರ್ಥಿಸುತ್ತೇವೆ. ನಿಜವಾದ ಪ್ರಾರ್ಥನೆಯೆಂದರೆ ವಚನಗಳನ್ನು ಹಾಡುವುದು. ವಚನಗಳನ್ನು ಹಾಡಬಹುದು ಎಂದು ತೋರಿಸಿದವರು ನಮ್ಮ ದೀಕ್ಷಾ ಗುರುಗಳಾದ ಶಿವಕುಮಾರ ಸ್ವಾಮೀಜಿ ಎಂದು ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಶಿವಧ್ವಜ ಅರಳಿಸುವ ಮೂಲಕ ರಾಷ್ಟ್ರೀಯ ನಾಟಕೋತ್ಸವಕ್ಕೆ ಚಾಲನೆ ನೀಡಿ ಶ್ರೀಗಳು ಮಾತನಾಡುತ್ತಾ, ವಚನಗಳನ್ನು ಹಾಡಬಹುದು ಎಂದು ತೋರಿಸಿದವರು ನಮ್ಮ ದೀಕ್ಷಾ ಗುರುಗ ಳಾದ ಶಿವಕುಮಾರ ಸ್ವಾಮೀಜಿ ಎಂದು ಹೇಳಿದರು.

ತರಳಬಾಳು ಹುಣ್ಣಿಮೆಯನ್ನು ಶಿವಧ್ವಜ ಅರಳಿಸುವ ಮೂಲಕ ಉದ್ಘಾಟಿಸುತ್ತೇವೆ. ಹೀಗೆಯೇ ರಾಜ್ಯೋತ್ಸವದ ಅಂಗವಾಗಿ ಕನ್ನಡ ಧ್ವಜದೊಂದಿಗೆ ಶಿವಧ್ವಜವನ್ನೂ ಅರಳಿಸಿದ್ದೇವೆ. ಶರಣರ ಬದುಕೆಂದರೆ ನಡೆ-ನುಡಿ ಒಂದಾಗುವುದು. ನಮ್ಮ ಮಾತು ಮಧುರವಾಗಿರಬೇಕು. ಎಲ್ಲರ ಮನಸ್ಸನ್ನು ಮುಟ್ಟಬೇಕು, ತಟ್ಟಬೇಕು' ಎಂದು ಕಿವಿಮಾತು ಹೇಳಿದರು.

ನಂತರ ನಡೆದ ಚಿಂತನಾಗೋಷ್ಠಿಯಲ್ಲಿ 'ಸಿರಿಯ ನೆಚ್ಚಿ ಕೆಡಬೇಡ' ಕುರಿತು ಮಾತನಾಡಿದ ವಿಶ್ರಾಂತ ಪ್ರಾಚಾರ್ಯ ಐ.ಜಿ.ಚಂದ್ರಶೇಖರಯ್ಯ, ನಮ್ಮ ನಾಡಿಗೆ ಮಳೆಯ ಬರ ಮಾತ್ರವಲ್ಲ, ಕರುಣೆಯ ಬರವೂ ಕಾಡುತ್ತಿದೆ. ದಯೆಯ ಬರ, ಅಹಿಂಸೆಯ ಬರ, ಸತ್ಯದ ಬರ ಕಾಡುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಹಣದ ಹಿಂದೆ ಹೋಗುವ ಮೂಲಕ ಹೆಣವಾಗುತ್ತಿದ್ದೇವೆ. ನೆಮ್ಮದಿ, ಶಾಂತಿಯನ್ನು ಕಳೆದುಕೊಂಡಿದ್ದೇವೆ. ಸಾಮಾಜಿಕ ಜೀವನ ರೋಗಗ್ರಸ್ತವಾಗಿದೆ. ಇದಕ್ಕಾಗಿ ನಾವು ಹಣಕ್ಕೆ ಮಹತ್ವ ಕೊಡುವುದರ ಬದಲು ಗುಣಕ್ಕೆ ಮಹತ್ವ ಕೊಡಬೇಕು. ಎಲ್ಲರ ಆಲೋಚನೆ, ಮಾತು ಮತ್ತು ವರ್ತನೆ ಒಂದಾದಾಗ ನೆಮ್ಮದಿಯ ಜೀವನ ನಡೆಸಲು ಸಾಧ್ಯ. ಹಣದಿಂದ ಎಲ್ಲವನ್ನೂ ಕೊಳ್ಳುತ್ತೇವೆ ಎಂಬ ಅಹಂಕಾರ ಅಳಿಯಬೇಕು ಎಂದು ಅವರು ಸಲಹೆ ನೀಡಿದರು.

ಕನ್ನಡದ ಧ್ವಜಾರೋಹಣ ನೆರವೇರಿಸಿದ ಹಿರಿಯ ಲೇಖಕ ಬಿ.ತಿಪ್ಪೇರುದ್ರಪ್ಪ ಮಾತನಾಡಿ, 'ಕನ್ನಡ ಭಾಷೆಯನ್ನು ಚೆನ್ನಾಗಿ ಕಲಿಯಿರಿ ಮತ್ತು ಬಳಸುವುದರ ಜೊತೆಗೆ ಇತರೆ ಭಾಷೆಗಳನ್ನು ಪ್ರೀತಿಸಿ' ಎಂದು ಕಿವಿಮಾತು ಹೇಳಿದರು. ಎಚ್.ಎಸ್. ನಾಗರಾಜ್ ವಚನ ಪ್ರಾರ್ಥನೆ ನಡೆಸಿಕೊಟ್ಟರು.



# ಹಾಲಿವಾಣದಲ್ಲಿ ಸಂಭ್ರಮದ ರಾಜ್ಯೋತ್ಸವ

ಮಲೇಬೆನ್ನೂರು, ನ.3- ಹಾಲಿವಾಣದಲ್ಲಿ ಸ್ವಾಮಿ ವಿವೇಕಾನಂದ ಆಟೋ ಮಾಲೀಕರು ಮತ್ತು ಚಾಲಕರ ಸಂಘದ ವತಿಯಿಂದ ಪ್ರಥಮ ಬಾರಿಗೆ ಕನ್ನಡ ರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು. ತಾಯಿ ಭುವನೇಶ್ವರಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿದ ಆಟೋ ಮಾಲೀಕರು ಹಾಗೂ ಚಾಲಕರು ನಂತರ ಎಲ್ಲರಿಗೂ ಸಿಹಿ ವಿತರಿಸಿದರು. ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಲಕ್ಷ್ಮಿದೇವಿ ಮಂಜುನಾಥ್, ಉಪಾಧ್ಯಕ್ಷೆ ಶ್ರೀಮತಿ ಕಮಲಬಾಯಿ ಪರಮೇಶ್ವರನಾಯ್ಕ, ತಾ.ಪಂ. ಮಾಜಿ ಅಧ್ಯಕ್ಷ ಎಸ್.ಜಿ.ಪರಮೇಶ್ವರಪ್ಪ, ಪಿಡಿಓ ಶ್ರೀನಿವಾಸ್ ಭಾಗವಹಿಸಿದ್ದರು.

# ಅಕ್ರಮವಾಗಿ ಅಮೆರಿಕಗೆ ತೆರಳುವ ಯತ್ನ 97 ಸಾವಿರ ಭಾರತೀಯರ ಬಂಧನ

## ಅಮೆರಿಕ ಅಕ್ರಮ ವಲಸೆ ಪ್ರಯತ್ನದಲ್ಲಿ ಐದು ಪಟ್ಟು ಹೆಚ್ಚಳ

ವಾಷಿಂಗ್ಟನ್, ನ. 3 - ಕಳೆದ ಒಂದು ವರ್ಷದಲ್ಲಿ ಅಕ್ರಮವಾಗಿ ಅಮೆರಿಕಗೆ ತೆರಳಲು ಯತ್ನಿಸಿದ್ದ 96,917 ಜನರನ್ನು ಬಂಧಿಸಲಾಗಿದೆ ಎಂದು ಇತ್ತೀಚಿನ ಅಮೆರಿಕ ಸುಂಕ ಹಾಗೂ ಗಡಿ ರಕ್ಷಣಾ ಸಂಸ್ಥೆ (ಯು.ಸಿ.ಬಿ.ಪಿ.) ಮಾಹಿತಿ ತಿಳಿಸಿದೆ. ಕಳೆದ ಕೆಲ ವರ್ಷಗಳಲ್ಲಿ ಅಕ್ರಮವಾಗಿ ಅಮೆರಿಕದ ಗಡಿ ದಾಟಲು ಯತ್ನಿಸಿ ಬಂಧನಕ್ಕೊಳಗಾದ ಭಾರತೀಯರ ಸಂಖ್ಯೆ ಐದು ಪಟ್ಟು ಹೆಚ್ಚಾಗಿದೆ.

2019-20ರಲ್ಲಿ 19,883 ಭಾರತೀಯರನ್ನು ಬಂಧಿಸಲಾಗಿತ್ತು. 2021-22ರಲ್ಲಿ 30,662 ಹಾಗೂ 2022-23ರಲ್ಲಿ 63,927 ಭಾರತೀಯರನ್ನು ಬಂಧಿಸಲಾಗಿತ್ತು.

ಅಕ್ಟೋಬರ್ 2022ರಿಂದ ಸೆಪ್ಟೆಂಬರ್ 2023ರ ನಡುವೆ 96,917 ಭಾರತೀಯರನ್ನು ಬಂಧಿಸಲಾಗಿದೆ. 30 ಸಾವಿರ ಜನರನ್ನು ಕೆನಡಾ ಗಡಿಯಲ್ಲಿ ಹಾಗೂ 41 ಸಾವಿರ ಜನರನ್ನು ಮೆಕ್ಸಿಕೋ ಗಡಿಯಲ್ಲಿ ಬಂಧಿಸಲಾಗಿದೆ.

ಬಂಧಿತ ರನ್ನು ಅಪ್ರಾಪ್ತರು, ಕೌಟುಂಬಿಕ ಸದಸ್ಯರು, ಒಂಟಿ ವಯಸ್ಕರು ಹಾಗೂ ಮಕ್ಕಳಿಲ್ಲದೇ ಬಂದವರು ಎಂಬ ನಾಲ್ಕು ವಿಭಾಗಗಳಲ್ಲಿ ವಿಭಜಿಸಲಾಗಿದೆ.

2023ರಲ್ಲಿ 84 ಸಾವಿರ ಜನ ವಯಸ್ಕರು ಒಂಟಿಯಾಗಿ ಬಂದು ಬಂಧನಕ್ಕೊಳಗಾಗಿದ್ದಾರೆ. 730 ಜನ ಅಪ್ರಾಪ್ತರೊಂದಿಗೆ ಬಂದಿದ್ದಾರೆ.

ಜನರು ಫ್ರಾನ್ಸ್ ರೀತಿಯ ದೇಶಗಳ ಮೂಲಕ ಮೆಕ್ಸಿಕೋಗೆ ಬರುತ್ತಿದ್ದಾರೆ. ಅಲ್ಲಿಂದ ಕೆಲ ತಂಡಗಳು ಇವರನ್ನು ಬಸ್‌ನಲ್ಲಿ ಗಡಿಯವರೆಗೆ ತಂದು ಬಿಡುತ್ತಿದ್ದಾರೆ ಎಂದು ಅಮೆರಿಕದ ಸೆನೆಟರ್ ಜೇಮ್ಸ್ ಲ್ಯಾಂಕ್‌ಫೋರ್ಡ್ ಹೇಳಿದ್ದಾರೆ.

ಕೆಲ ತಂಡಗಳಿಗೆ ಹಣ ನೀಡಿ 45 ಸಾವಿರ ಭಾರತೀಯರು ದಕ್ಷಿಣದ ಗಡಿ ದಾಟಿ ಬಂದಿದ್ದಾರೆ. ಭಾರತದಲ್ಲಿ ತಮಗೆ ಬೆದರಿಕೆ ಇದೆ ಎಂದವರು ಹೇಳಿದ್ದಾರೆ ಎಂದು ಲ್ಯಾಂಕ್‌ಫೋರ್ಡ್ ತಿಳಿಸಿದ್ದಾರೆ.

ಅಮೆರಿಕದಲ್ಲಿ ಆಶ್ರಯ ಪಡೆಯಲು ಯಾವ ರೀತಿಯ 'ಆಟಗಳನ್ನು' ಆಡಬೇಕು ಎಂಬುದನ್ನು ಮೆಕ್ಸಿಕೋದ ಅಪರಾಧಿಕ ತಂಡಗಳು ವಿಶ್ವದಾದ್ಯಂತದ ವಲಸಿಗರಿಗೆ ಕಲಿಸಿ ಕೊಡುತ್ತಿವೆ ಎಂದು ನಾನು ಹಿಂದಿನಿಂದಲೂ ಹೇಳುತ್ತಲೇ ಬಂದಿದ್ದೇನೆ ಎಂದು ಸೆನೆಟರ್ ತಿಳಿಸಿದ್ದಾರೆ.

ವಲಸೆ ವಿಷಯದ ಬಗ್ಗೆ ವಿಶ್ವದ ಎಲ್ಲ ದೇಶಗಳು ಬದಲಾಗಿವೆ.

ಆದರೆ, ನಾವು ಮಾತ್ರ ಬದಲಾಗಿಲ್ಲ. ವಿಶ್ವದಾದ್ಯಂತದ ಜನರು ನಮ್ಮ ವ್ಯವಸ್ಥೆ ದುರ್ಬಳಕೆ ಮಾಡಿಕೊಳ್ಳಲು ಆಹ್ವಾನಿಸುತ್ತಿದ್ದೇವೆ ಎಂದವರು ಹೇಳಿದ್ದಾರೆ.

# ಜಿಲ್ಲಾ ಕ್ರೀಡಾಂಗಣದಲ್ಲಿ ಕನ್ನಡ ರಾಜ್ಯೋತ್ಸವ



ದಾವಣಗೆರೆ, ನ. 3 - ದಾವಣಗೆರೆ ಇಲೆವೆನ್ಸ್ ಹಾಗೂ ಜಿಲ್ಲಾ ಕ್ರೀಡಾಪಟುಗಳ ಸಾಂಸ್ಕೃತಿಕ ಸಂಘದ ವತಿಯಿಂದ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಂಡಿದ್ದ ಕನ್ನಡ ರಾಜ್ಯೋತ್ಸವದ ಅಂಗವಾಗಿ ಬೆಳಿಗ್ಗೆ ಧ್ವಜಾರೋಹಣ ನೆರವೇರಿಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಕ್ರೀಡಾಪಟುಗಳ ಸಂಘದ ದಿನೇಶ್ ಕೆ.ಶೆಟ್ಟಿ, ಶಿವಗಂಗಾ ಶ್ರೀನಿವಾಸ್, ರಾಜುರೆಡ್ಡಿ, ಕೆ.ಜಿ.ಶಿವಕುಮಾರ್, ಹೆಚ್.ಮಹಾದೇವ್, ಮಾಲತೇಶ್ ಎಂ.ಆರ್., ರಂಗನಾಥ್, ಕುರುಡಿ ಗಿರೀಶ್, ಜಯಪ್ರಕಾಶ್ ಗೌಡ ಉಪಸ್ಥಿತರಿದ್ದರು. ಸಂಜೆ ಭದ್ರಾವತಿ ಬ್ರದರ್ಸ್ ಅವರಿಂದ ರಸಮಂಜರಿ ಕಾರ್ಯಕ್ರಮ ನಡೆಯಿತು.

# ಬೇಸಾಯದಲ್ಲಿ ತೊಡಗಿದ ಪಾಕ್ ಸೈನ್ಯ

## ಆರಂಭದಲ್ಲಿ ಸಾವಿರ ಎಕರೆ ಪ್ರದೇಶದಲ್ಲಿ ಕೃಷಿ ಚಟುವಟಿಕೆ

ಪೇಷಾವರ, ನ. 3 – ಪಾಕಿಸ್ತಾನದ ಸೈನ್ಯ ಈಗ ಬೇಸಾಯದಲ್ಲಿ ತೊಡಗಿಕೊಂಡಿದೆ. ಖೈಬರ್ ಪಖ್ತುಂಖ್ವ ಪ್ರಾಂತ್ಯದ ಸಾವಿರ ಎಕರೆ ಪ್ರದೇಶದಲ್ಲಿ ಸೈನ್ಯ ಕೃಷಿ ಚಟುವಟಿಕೆ ಆರಂಭಿಸಿದೆ.

ಪಾಕಿಸ್ತಾನದ ಸೈನ್ಯ ಕಳೆದ 75 ವರ್ಷಗಳಲ್ಲಿ ನೇರವಾಗಿ, ಇಲ್ಲವೇ ಪರೋಕ್ಷವಾಗಿ ಆಡಳಿತ ನಡೆಸುತ್ತಾ ಬಂದಿದೆ. ಭದ್ರತೆ ಹಾಗೂ ವಿದೇಶಾಂಗ ನೀತಿಯಲ್ಲಿ ಪ್ರಬಲ ಹಿಡಿತ ಹೊಂದಿದೆ. ಆದರೆ, ಕೃಷಿ ವಲಯಕ್ಕೆ ಕಾಲಿರಿಸಿರುವುದು ಇದೇ ಮೊದಲು. ಆಹಾರ ಸ್ವಾವಲಂಬನೆಗಾಗಿ ಸೈನ್ಯ ಕೃಷಿಗೆ ಮುಂದಾಗಿದೆ ಎಂದು ಅಲ್ಲಿನ ಮಾಧ್ಯಮಗಳು ತಿಳಿಸಿವೆ.

ಆರಂಭದಲ್ಲಿ ಸೈನ್ಯ 1,000 ಎಕರೆ ಪ್ರದೇಶದಲ್ಲಿ ಬೇಸಾಯ ನಡೆಸಲಿದೆ. ನಂತರ ದಕ್ಷಿಣ ವಾಜಿರಿಸ್ತಾನದ ಜರ್ಮಾಲಮ್ ಪ್ರದೇಶದ 41 ಸಾವಿರ ಎಕರೆ ಪ್ರದೇಶಗಳಲ್ಲಿ ಬೇಸಾಯ ನಡೆಸಲಾಗುವುದು ಎಂದು ದಿ ನ್ಯೂಸ್ ಇಂಟರ್‌ನ್ಯಾಷನಲ್ ವರದಿ ಮಾಡಿದೆ.

ಈ ಯೋಜನೆಯಿಂದ ಕೃಷಿ ಇಳುವರಿ ಹೆಚ್ಚಾಗಲಿದೆ ಹಾಗೂ ಆಹಾರ ಸ್ವಾವಲಂಬನೆಗೆ ಉತ್ತೇಜನ ಸಿಗಲಿದೆ ಎಂದು ಪೇಷಾವರದ ಕಾರ್ಪ್ಸ್ ಕಮಾಂಡರ್ ಲೆಫ್ಟಿನೆಂಟ್ ಜನರಲ್ ಸರ್ದಾರ್ ಹಸನ್ ಅಜರ್ ಹಯಾತ್ ತಿಳಿಸಿದ್ದಾರೆ.

ಫಲವತ್ತಾದ ಇಂಡಸ್ ಕಣಿವೆಯಿಂದ ದೂರವಿರುವ ಖೈಬರ್ ಪಖ್ತುಂಖ್ವ ಆಫ್ಘಾನಿಸ್ತಾನದ ಗಡಿಗೆ ಹತ್ತಿರವಾಗಿದೆ. ಇದು ಬೆಟ್ಟಗಳ ಪ್ರದೇಶವಾಗಿದ್ದು, ಇಲ್ಲಿ ಸಾಕಷ್ಟು ಬಂಜರು ಭೂಮಿ ಇದೆ. ಬೇಸಿಗೆಯಲ್ಲಿ ಬಿಸಿಲು ತೀವ್ರವಾಗಿದ್ದರೆ, ಚಳಿಗಾಲದಲ್ಲಿ ತಾಪಮಾನ ಕುಸಿಯುತ್ತದೆ.

ಈ ಪ್ರದೇಶ ಸಂಘರ್ಷ ಪೀಡಿತವಾಗಿದೆ. ಸಾಕಷ್ಟು ಜನರು ಇಲ್ಲಿಂದ ಹೊರ ಹೋಗಿದ್ದರು. ಇದರಿಂದಾಗಿ ಕೃಷಿ ಚಟುವಟಿಕೆಗಳಿಗೆ ಹಿನ್ನಡೆಯಾಗಿತ್ತು. 2015ರ ನಂತರ ಈ ಪ್ರದೇಶದ ಜನರು ವಾಪಸ್ಸಾಗಲು ಸೈನ್ಯ ಅವಕಾಶ ಮಾಡಿಕೊಟ್ಟಿತ್ತು.

ಆದರೆ, ಇತ್ತೀಚಿನ ದಿನಗಳಲ್ಲಿ ಈ ಪ್ರದೇಶದಲ್ಲಿ ಮತ್ತೆ ಉಗ್ರವಾದಿ ದಾಳಿಗಳು ಕಾಣಿಸಿಕೊಂಡಿವೆ. ಅಲ್ಲದೇ, ಈ ಪ್ರದೇಶದಲ್ಲಿ ನೀರಾವರಿ ಕೊರತೆ ಇದೆ. ಇದೂ ಸಹ ಕೃಷಿಗೆ ಅಡ್ಡಿಯಾಗಲಿದೆ.

# ಮಲ್ಟಿ ಬ್ರಾಂಡೆಡ್ ರೆಡಿಮೇಡ್ ಗಾರ್ಮೆಂಟ್ಸ್ ಭಾರೀ ರಿಯಾಯಿತಿ, ಮಾರಾಟ ಮೇಳ

**ನಗರದಲ್ಲಿ ಇಂದಿನಿಂದ ಶುಭಾರಂಭ**

ಮಲ್ಟಿ ಬ್ರಾಂಡೆಡ್ ರೆಡಿಮೇಡ್ ಉಡುಪುಗಳನ್ನು ನಗರದ ರೇಣುಕ ಮಂದಿರದಲ್ಲಿ ನೇರವಾಗಿ ಮಿಲ್‌ಗಳ ದರದಲ್ಲಿ ಗ್ರಾಹಕರಿಗೆ ದೀಪಾವಳಿ ಹಬ್ಬಕ್ಕಾಗಿ ಒದಗಿಸಬೇಕೆಂಬ ಸದುದ್ದೇಶದಿಂದ ಭಾರೀ ರಿಯಾಯಿತಿಯ ಮಾರಾಟ ಮೇಳವನ್ನು ಆಯೋಜಿಸಲಾಗಿದೆ.

ಬ್ರಾಂಡೆಡ್ ಕಂಪನಿಗಳ ಉಡುಪುಗಳು, ಮಕ್ಕಳು, ಯುವಕರು, ಪುರುಷರು, ವಯೋವೃದ್ದರು ಹೀಗೆ ಎಲ್ಲಾ ವರ್ಗದವರಿಗೂ ಲಭ್ಯವಿದ್ದು, ಭಾರೀ ರಿಯಾಯಿತಿಯನ್ನು ನೀಡಲಾಗಿದೆ.

# ನಗರದಲ್ಲಿ ನಾಳೆ ಮಕ್ಕಳಿಗಾಗಿ ಚಿತ್ರಕಲಾ ಸ್ಪರ್ಧೆ


ದಾವಣಗೆರೆ,ನ.3- ನಗರದ ಲಯನ್ಸ್ ಕ್ಲಬ್ ವತಿಯಿಂದ ನಾಡಿದ್ದು ದಿನಾಂಕ 5ರ ಭಾನುವಾರ ಬೆಳಿಗ್ಗೆ 8.15 ರಿಂದ 9.15ರವರೆಗೆ ಮಕ್ಕಳಿಗಾಗಿ ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ಎಂದು ಕ್ಲಬ್ಬಿನ ಅಧ್ಯಕ್ಷ ಉಮೇಶ್ ನೀಲಿ, ಕಾರ್ಯದರ್ಶಿ ಭೀಮಾನಂದ ಶೆಟ್ಟಿ ತಿಳಿಸಿದ್ದಾರೆ. ಸ್ಪರ್ಧೆಯಲ್ಲಿ ಆಯ್ಕೆಯಾದ ಮೂರು ಅತ್ಯುತ್ತಮ ಚಿತ್ರಗಳಿಗೆ ಕ್ರಮವಾಗಿ 2,000 ರೂ., 1,500 ರೂ., 1,000 ರೂ. ನೀಡಲಾಗುತ್ತದೆ. ವಿವರಕ್ಕೆ ಬೆಳ್ಳೂಡಿ ಶಿವಕುಮಾರ್ (94481-19815), ಎಂ.ಎನ್. ಅಮಿತ್ (98807-43838), ಸಿ. ಅಜಯ್ ನಾರಾಯಣ (94805-42751) ಅವರನ್ನು ಸಂಪರ್ಕಿಸಬಹುದು.

# ನಗರಕ್ಕಿಂದು ಸಚಿವ ಸಂತೋಷ್ ಲಾಡ್



ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಇಂದು ನಗರಕ್ಕೆ ಆಗಮಿಸಲಿ ದ್ದಾರೆ ಎಂದು ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ ತಿಳಿಸಿದ್ದಾರೆ. ಇಂದು ಮಧ್ಯಾಹ್ನ 3 ಗಂಟೆಗೆ ಜಿಲ್ಲಾ ಕಾಂಗ್ರೆಸ್ ಕಛೇರಿಗೆ ಸಚಿವರು ಆಗಮಿಸಲಿದ್ದು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ.ಮಂಜಪ್ಪ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ಭಾಗವಹಿಸುವರು.

# ನಗರದಲ್ಲಿ ಸಂತೋಷದ ಕಾರ್ಯಾಗಾರ



ದಾವಣಗೆರೆ, ನ.3-ಗುರುದೇವ ಶ್ರೀ ರವಿಶಂಕರ್ ಅವರ ಆರ್ಟ್ ಆಫ್ ಲಿವಿಂಗ್ ಆಶ್ರಯದಲ್ಲಿ 18 ವರ್ಷ ಮೇಲ್ಪಟ್ಟವರಿಗೆ ಸಂತೋಷದ ಕಾರ್ಯಾಗಾರ (ಸುದರ್ಶನ ಕ್ರಿಯೆ) ಡಾ. ಬಾಣಾಪುರಮಠ ಮಕ್ಕಳ ಆಸ್ಪತ್ರೆಯ 2ನೇ ಮಹಡಿಯಲ್ಲಿ ಇದೇ ದಿನಾಂಕ 6ರಿಂದ 11ರವರೆಗೆ ಬೆಳಿಗ್ಗೆ ಮತ್ತು ಸಂಜೆ 2 ಬ್ಯಾಚುಗಳಲ್ಲಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸಿ : 99005 01877, 77601 55659.

# ಬೀದಿಬದಿ ವ್ಯಾಪಾರಸ್ಥರಿಂದ ಸುಂಕ ವಸೂಲಾತಿ ಸ್ಥಗಿತ

ದಾವಣಗೆರೆ, ನ. 3 - ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ ಬೀದಿ ಬದಿ ವ್ಯಾಪಾರಸ್ಥರಿಂದ ಸುಂಕ ವಸೂಲಾತಿ ಮಾಡುವ ಬಗ್ಗೆ ಯಾವುದೇ ಗುತ್ತಿಗೆಯನ್ನು ನೀಡಿರುವುದಿಲ್ಲ. ಮತ್ತು ಪಾಲಿಕೆ ಸಿಬ್ಬಂದಿ ವತಿಯಿಂದ ಇನ್ನೂ ಮುಂದೆ ನ.2 ರಿಂದ ಮುಂದಿನ ಆದೇಶದವರೆಗೆ ಸುಂಕ ವಸೂಲಾತಿ ಮಾಡುವುದನ್ನು ಸ್ಥಗಿತಗೊಳಿಸಲಾಗಿದೆ. ಆದ್ದರಿಂದ ಬೀದಿಬದಿ ವ್ಯಾಪಾರಸ್ಥರು ಮುಂದಿನ ಆದೇಶದವರೆಗೆ ಯಾರಿಗೂ ಸುಂಕವನ್ನು ಪಾವತಿಸಬಾರದೆಂದು ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕಾ ತಿಳಿಸಿದ್ದಾರೆ.

# ನಗರದ 7 ಕೇಂದ್ರಗಳಲ್ಲಿ ಇಂದು - ನಾಳೆ ಕೆಪಿಎಸ್‌ಸಿ ವಿವಿಧ ಹುದ್ದೆಗಳ ಭರ್ತಿಗೆ ಪರೀಕ್ಷೆ



ದಾವಣಗೆರೆ, ನ. 3 - ಕರ್ನಾಟಕ ಲೋಕಸೇವಾ ಆಯೋಗದ ವಿವಿಧ ಹುದ್ದೆಗಳ ಭರ್ತಿಗೆ ನಾಳೆ ದಿನಾಂಕ 4 ಮತ್ತು 5ರಂದು ನಗರದ 7 ಕೇಂದ್ರಗಳಲ್ಲಿ ಸ್ಪರ್ಧಾತ್ಮಕ ಪರೀಕ್ಷೆ ನಡೆಯಲಿದ್ದು, ಪರೀಕ್ಷಾ ಕೇಂದ್ರಗಳಲ್ಲಿ ಅಭ್ಯರ್ಥಿಗಳು ಯಾವುದೇ ವಾಮಮಾರ್ಗಗಳನ್ನು ಅನುಸರಿಸದಂತೆ ಅಧಿಕಾರಿಗಳು ಕ್ರಮ ವಹಿಸಿ, ಪಾರದರ್ಶಕವಾಗಿ ಪರೀಕ್ಷೆ ನಡೆಸಬೇಕು ಎಂದು ಡಿ.ಡಿ.ಪಿ.ಐ ಕೊಟ್ರೇಶ್ ಸೂಚಿಸಿದರು.

ಶುಕ್ರವಾರ ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ವಿವಿಧ ಹುದ್ದೆಗಳ ಪೂರ್ವಭಾವಿ ಪರೀಕ್ಷಾ ಸಿದ್ಧತಾ ಸಭೆಯಲ್ಲಿ ಮಾತನಾಡಿದರು.

ಆಯೋಗದ ಪರೀಕ್ಷೆಗಳಲ್ಲಿ ದುರಾಚಾರಗಳನ್ನು ತಡೆಗಟ್ಟಲು ಮತ್ತು ಪಾರದರ್ಶಕವಾಗಿ ಪರೀಕ್ಷೆ ನಡೆಸಲು ಪ್ರತಿ ಪರೀಕ್ಷಾ ಕೊಠಡಿಗಳಲ್ಲಿ ಸಿ.ಸಿ ಕ್ಯಾಮೆರಾಗಳನ್ನು ಕೊಠಡಿಗೆ ಹಂಚಿಕೆ ಮಾಡಲಾದ ಎಲ್ಲಾ 24 ಅಭ್ಯರ್ಥಿಗಳು ಕವರೇಜ್ ಆಗುವಂತೆ ಅಳವಡಿಸಲಾಗಿದೆ.

ಪರೀಕ್ಷಾ ಕೇಂದ್ರಗಳ ಸುತ್ತಮುತ್ತ 200 ಮೀಟರ್ ವ್ಯಾಪ್ತಿ ಪ್ರದೇಶದಲ್ಲಿ ಸಾರ್ವಜನಿಕ ಪ್ರವೇಶವನ್ನು ನಿಷೇಧಿಸಲಾಗಿದೆ ಮತ್ತು ಜೆರಾಕ್ಸ್ ಅಂಗಡಿ ಹಾಗೂ ಸೈಬರ್ ಕೆಫೆಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚಿಸಲು ಪೊಲೀಸ್ ಇಲಾಖೆ ಕ್ರಮವಹಿಸಬೇಕು. ಪರೀಕ್ಷಾರ್ಥಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆ, ಮಾರ್ಕಿಂಗ್ ಹಾಗೂ ಶೌಚಾಲಯದ ವ್ಯವಸ್ಥೆ ಮಾಡಿಕೊಡಬೇಕು ಹಾಗೂ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಮೊಬೈಲ್, ಎಲೆಕ್ಟ್ರಿಕಲ್ ವಾಚ್, ಕ್ಯಾಲ್ಕುಲೇಟರ್ ಸೇರಿದಂತೆ ಇತರೆ ಎಲೆಕ್ಟ್ರಾನಿಕ್ಸ್ ಉಪಕರಣಗಳನ್ನು ತರುವುದನ್ನು ನಿಷೇಧಿಸಲಾಗಿದೆ ಎಂದರು.

ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ಕರಿಸಿದ್ದಪ್ಪ, ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ರಮೇಶ್ ಪಿ ಉಪಸ್ಥಿತರಿದ್ದರು.

# ನಗರದಲ್ಲಿ ಇಂದು ಮಹಿಳೆಯರಿಗೆ ವಿವಿಧ ಸಾಂಸ್ಕೃತಿಕ ಕ್ರೀಡೆಗಳು

ಶ್ರೀ ಡಿ. ದೇವರಾಜ ಅರಸು ಬಡಾವಣೆ ಎ ಬ್ಲಾಕ್‌ನ ನಾಗರಿಕ ಹಿತರಕ್ಷಣಾ ಸಮಿತಿಯಿಂದ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಮಹಿಳೆಯರಿಗೆ ವಿವಿಧ ಸಾಂಸ್ಕೃತಿಕ ಕ್ರೀಡೆಗಳನ್ನು ಇಂದು ಸಂಜೆ 6.30ಕ್ಕೆ ಬಡಾವಣೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಾಮಾಜಿಕ ಸೇವಾ ಕಾರ್ಯಕರ್ತರಾದ ಕೆ.ಎಂ. ವೀರಯ್ಯ, ನಟರಾಜ್, ಎಸ್. ವಿನಾಯಕ ತಿಳಿಸಿದ್ದಾರೆ.

ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯರಾದ ಶ್ರೀಮತಿ ಪ್ರಭಾ ಮಲ್ಲಿಕಾರ್ಜುನ್, ನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಆಶಾ ಉಮೇಶ್, ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷರಾದ ಶ್ರೀಮತಿ ನಾಗರತ್ನಮ್ಮ ಮಲ್ಲೇಶಪ್ಪ, ಹಿರಿಯ ನ್ಯಾಯವಾದಿ ಶ್ರೀಮತಿ ವಸುಂದರ, ಶ್ರೀಮತಿ ತ್ರಿವೇಣಿ ಎಸ್.ಟಿ.ಪಿ. ತಿಪ್ಪೇಶ್, ಶ್ರೀಮತಿ ಮಹಾಲಕ್ಷ್ಮಿ ನರಸಿಂಹಮೂರ್ತಿ, ಕೆಎಸ್ಸಾರ್ಟಿಸಿ ಅಧಿಕಾರಿ ಶ್ರೀಮತಿ ನೀತಾ ಮಂಜುನಾಥ್ ಮತ್ತಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.


## ಮಾನ್ಯ 3ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯ (ಹಿರಿಯ ವಿಭಾಗ) ಹಾಗೂ ಜೆ.ಎಂ.ಎಫ್.ಸಿ. ದಾವಣಗೆರೆ

ಓ.ಎಸ್. ನಂ. 337/2022

**ವಾದಿಯರು :** ಶ್ರೀ ಗೋಪಿನಾಥ ಮೃತ ವಾರಸುದಾರರು ವಿರುದ್ಧ
**ಪ್ರತಿವಾದಿಗಳು :** ಸುರೇಂದ್ರನಾಥ ಮತ್ತು ಇತರರು

**ಆದೇಶ 5 ನಿಯಮ 20(1)(ಎ) ಅಡಿಯಲ್ಲಿ ನೀಡಿರುವ ಸಾರ್ವಜನಿಕ ಪತ್ರಿಕಾ ಪ್ರಕಟಣೆಯ ನೋಟೀಸ್**

**ಪ್ರತಿವಾದಿ ನಂ. (3) : ಸುನಂದಾಬಾಯಿ @ ಲಲಿತಬಾಯಿ ಕೋಂ ಜಯಣ್ಣ,** 60 ವರ್ಷ, ಗೃಹಿಣಿ, ವಾಸ : ಡೋರ್ ನಂ. 81, ಮಣಿಕಂಠ ವೃತ್ತದ ಹತ್ತಿರ, ಚಿಕ್ಕನಹಳ್ಳಿ ಹೊಸಬಡಾವಣೆ, ನಿಟ್ಟುವಳ್ಳಿ, ದಾವಣಗೆರೆ.
**ಪ್ರತಿವಾದಿ ನಂ. (6) : ಗೀತಾಬಾಯಿ ಕೋಂ ಆರ್. ಮಂಜುನಾಥ ರಾವ್,** 50 ವರ್ಷ, ಗೃಹಿಣಿ, ವಾಸ : ಡೋರ್ ನಂ. 81, ಮಣಿಕಂಠ ವೃತ್ತದ ಹತ್ತಿರ, ಚಿಕ್ಕನಹಳ್ಳಿ ಹೊಸಬಡಾವಣೆ, ನಿಟ್ಟುವಳ್ಳಿ ದಾವಣಗೆರೆ.
**ಪ್ರತಿವಾದಿ ನಂ. (7) : ಶ್ರೀ ರಾಜು ಬಿನ್ ಜಯರಾಂ** 48 ವರ್ಷ, ವ್ಯಾಪಾರಿ, ವಾಸ : ಡೋರ್ ನಂ. 204/7, ಚಿಕ್ಕನಹಳ್ಳಿ ಹೊಸಬಡಾವಣೆ, ನಿಟ್ಟುವಳ್ಳಿ ದಾವಣಗೆರೆ.
**ಪ್ರತಿವಾದಿ ನಂ. (9) : ಶ್ರೀ ವಿಜಯ್ ಕುಮಾರ್ ಬಿನ್ ಜಯರಾಂ** 42 ವರ್ಷ, ವ್ಯಾಪಾರಿ, ವಾಸ : ಡೋರ್ ನಂ. 204/7, ಚಿಕ್ಕನಹಳ್ಳಿ ಹೊಸಬಡಾವಣೆ, ನಿಟ್ಟುವಳ್ಳಿ ದಾವಣಗೆರೆ.

ಈ ಮೇಲ್ಕಂಡ ದಾವೆಯಲ್ಲಿ ವಾದಿಯರು ಸುರೇಂದ್ರನಾಥ ಮತ್ತು ಇತರರುಗಳು ವಿರುದ್ಧ ಪಾಲುವಿಭಾಗ ಕೋರಿ ದಾವೆ ಸಲ್ಲಿಸಿದ್ದು ಇರುತ್ತದೆ. ಸದರಿ ದಾವೆಯಲ್ಲಿ ಮೇಲ್ಕಂಡ ಪ್ರತಿವಾದಿಗಳಾದ ಸಂಖ್ಯೆ 3, 6, 7 ಮತ್ತು 9 ಸಾಕಷ್ಟು ಬಾರಿ ಸಮನ್ಸ್ ಮತ್ತು ನೋಂದಾಯಿತ ಅಂಚೆಯ ಮೂಲಕ ಕಳುಹಿಸಿದ್ದು, ಸದರಿ ಸಮನ್ಸ್ ಜಾರಿಯಾಗದ ಕಾರಣ ಪತ್ರಿಕಾ ಪ್ರಕಟಣೆಯ ಮೂಲಕ ಸದರಿ ದಾವೆ ಸಂಖ್ಯೆ : 337/2022ರ 3ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹಿರಿಯ ವಿಭಾಗದಲ್ಲಿ ದಿನಾಂಕವನ್ನು 06.11.2023ರಂದು ಬೆಳಿಗ್ಗೆ 11-00 ಗಂಟೆಗೆ ನಿಗದಿಪಡಿಸಿದ್ದು ಇರುತ್ತದೆ. ಸದರಿ ದಾವೆಗೆ ತಾವುಗಳು ಹಾಜರಾಗಿ ತಕರಾರು ಇದ್ದಲ್ಲಿ ತಾವಾಗಲೀ, ತಮ್ಮ ಪರ ವಕೀಲರ ಮುಖಾಂತರವಾಗಲೀ ನಿಗದಿತ ದಿನಾಂಕದಂದು ಮತ್ತು ಸಮಯಕ್ಕೆ ಘನ ನ್ಯಾಯಾಲಯದಲ್ಲಿ ಹಾಜರಾಗಿ ಅಹವಾಲನ್ನು ಸಲ್ಲಿಸಬಹುದು. ತಪ್ಪಿದ್ದಲ್ಲಿ ಸದರಿ ದಾವೆಯಲ್ಲಿ ಏಕಪಕ್ಷೀಯ ಆದೇಶದ ಮೂಲಕ ತೀರ್ಮಾನಿಸಲಾಗುವುದು ಎಂದು ತಿಳಿಯಿರಿ. ನ್ಯಾಯಾಲಯದ ಅಪ್ಪಣೆ ಮೇರೆಗೆ ದಿನಾಂಕ 03.11.2023ರಂದು ನೀಡಲಾಗಿದೆ.

ವಾದಿಯರ ಪರ ವಕೀಲರು,
**ಕೊಟ್ರೇಶ್ ಮತ್ತಿಹಳ್ಳಿ,**
ಡೋರ್ ನಂ. 154, ಪಿ.ಜೆ. ಬಡಾವಣೆ, ದಾವಣಗೆರೆ.
ಸ್ಥಳ : ದಾವಣಗೆರೆ
ದಿನಾಂಕ 03.11.2023

ನ್ಯಾಯಾಲಯದ ಆದೇಶದ ಮೇರೆಗೆ
**ಸಹಿ /- ಹಿರಿಯ ಶಿರಸ್ತೇದಾರರು**
3ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. (ಹಿರಿಯ ವಿಭಾಗ) ನ್ಯಾಯಾಲಯ, ದಾವಣಗೆರೆ.


# ರೈಲ್ವೆ ಖಾಸಗೀಕರಣ ವಿರೋಧಿಸಿ ಸಿಐಟಿಯು ಪ್ರತಿಭಟನೆ




ದಾವಣಗೆರೆ, ನ. 3- ದೇಶದ ಆರ್ಥಿಕತೆಯ ಜೀವಾಳ ರೈಲ್ವೆ ಇಲಾಖೆಯ ಖಾಸಗೀಕರಣ ವಿರೋಧಿಸಿ ಸಿಐಟಿಯು ಜಿಲ್ಲಾ ಘಟಕದ ವತಿಯಿಂದ 'ಜನತೆಯನ್ನು ರಕ್ಷಿಸಿ, ದೇಶವನ್ನು ಉಳಿಸಿ' ಎಂಬ ಘೋಷ ವಾಕ್ಯದೊಂದಿಗೆ ನಗರದ ರೈಲ್ವೆ ನಿಲ್ದಾಣದ ಮುಂಭಾಗ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಲಾಯಿತು.

ಇದೇ ವೇಳೆ ಸಿಐಟಿಯು ಜಿಲ್ಲಾ ಸಂಚಾಲಕ ಕೆ.ಹೆಚ್. ಆನಂದರಾಜ್ ಮಾತನಾಡಿ, ಜನರ ಜೀವನಾಡಿಯಾದ ರೈಲ್ವೆ ವಲಯವನ್ನು ಸಂಪೂರ್ಣವಾಗಿ ಖಾಸಗಿರಕರಣ ಮಾಡಲು ಕೇಂದ್ರ ಸರ್ಕಾರ ಅಸ್ತು ನೀಡಿದೆ ಎಂದರು.

ದೇಶದ ಆರ್ಥಿಕತೆಯ ಜೀವಾಳವಾದ ರೈಲ್ವೆ ವಲಯ ವ್ಯಾಪ್ತಿಯಲ್ಲಿ 7500 ರೈಲ್ವೆ ನಿಲ್ದಾಣಗಳ ಮೂಲಕ 13452 ಪ್ರಯಾಣಿಕ ರೈಲುಗಳು ಸಂಚರಿಸುತ್ತಿವೆ ಎಂದು ಮಾಹಿತಿ ನೀಡಿದರು.

ಈ ರೈಲುಗಳ ಮೂಲಕ 2040 ಕೋಟಿ ಪ್ರಯಾಣಿಕರು ನಿತ್ಯ ಸಂಚರಿಸುತ್ತಿದ್ದಾರೆ. ಇದರ ಜೊತೆ ಆಹಾರ ಧಾನ್ಯಗಳನ್ನು, ಸಾಮಾನ್ಯ ಜನರು ಬಳಕೆ ಮಾಡುವ ಅಗತ್ಯ ವಸ್ತುಗಳನ್ನು ಮತ್ತು ಕೃಷಿ, ಕೈಗಾರಿಕಾ ಉತ್ಪನ್ನಗಳನ್ನು ಸಾಗಾಣಿಕೆ ಮಾಡಲು ಗೂಡ್ಸ್ ರೈಲುಗಳು ಸಂಚರಿಸುತ್ತಿವೆ. ಸುಮಾರು 1.42 ಶತಕೋಟಿ ಮೆಟ್ರಿಕ್ ಟನ್ ಸರಕುಗಳನ್ನು ಪ್ರತಿ ದಿನ ಸಾಗಾಣೆ ಮಾಡುತ್ತಿವೆ ಎಂದು ಹೇಳಿದರು.

ರೈಲ್ವೆ ವಲಯದ ಅಂಕಿ-ಅಂಶಗಳ ಪ್ರಕಾರ 2022-23 ರಲ್ಲಿ ಭಾರತೀಯ ರೈಲ್ವೆ ಇಲಾಖೆಯು 2.40 ಲಕ್ಷ ಕೋಟಿ ಆದಾಯ ಗಳಿಸಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ 49 ಸಾವಿರ ಕೋಟಿ ರೂ. ಲಾಭಂಶ ಗಳಿಸಿದೆ ಎಂದರು.

ಹೀಗಿದ್ದರೂ ಸಹ ಕೇಂದ್ರ ಸರ್ಕಾರ ರೈಲುಗಳನ್ನು ಮತ್ತು ನಿರ್ವಹಣೆಯನ್ನು ಶೇ. 100 ರಷ್ಟು ಖಾಸಗಿ ಹೂಡಿಕೆಗೆ ಅವಕಾಶ ಮಾಡಿಕೊಡುವ ಮೂಲಕ ರೈಲ್ವೆ ನಿಲ್ದಾಣ ಸೇರಿದಂತೆ ಅದಕ್ಕೆ ಸೇರಿರುವ ಎಲ್ಲಾ ಭೂಮಿಯನ್ನು ಖಾಸಗಿ ಕಂಪನಿಗಳಿಗೆ ಹಸ್ತಾಂತರ ಮಾಡಲಿದ್ದು, ಕಾರ್ಪೊರೇಟ್ ಕಂಪನಿಗಳ ಹಿತ ಕಾಯುವುದೇ ಕೇಂದ್ರ ಸರ್ಕಾರದ ಉದ್ದೇಶವಾಗಿದೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಹನುಮಂತಪ್ಪ, ಮಂಜುಳ, ಗಜೇಂದ್ರ, ಫಾರೂಕ್, ಪ್ರಕಾಶ್, ಶಶಿ ಆಚಾರ್ ಮತ್ತಿತರರು ಭಾಗವಹಿಸಿದ್ದರು.


## ಮಾನ್ಯ ಗೌರವಾನ್ವಿತ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ದಾವಣಗೆರೆ

ಪಿ ಅಂಡ್ ಎಸ್‌ಸಿ ನಂ. 40/2023

**ಅರ್ಜಿದಾರರು :** 1) **ರುದ್ರಮ್ಮ ಎನ್.ಟಿ. ಕೋಂ ಹನುಮಂತಪ್ಪ** ವಯಸ್ಸು ಸುಮಾರು 45 ವರ್ಷ, ಗೃಹಿಣಿ, 2) **ಲವ @ ರವಿಕುಮಾರ, ಹೆಚ್. ಬಿನ್ ಹನುಮಂತಪ್ಪ** ವಯಸ್ಸು ಸುಮಾರು 26 ವರ್ಷ, ಚಾಲಕ, 3) **ಕುಶ ಹೆಚ್. ಬಿನ್ ಹನುಮಂತಪ್ಪ**, ವಯಸ್ಸು ಸುಮಾರು 26 ವರ್ಷ, ಚಾಲಕ, ಎಲ್ಲರ ವಾಸ: 506, ಮಾಯಕೊಂಡ, ಗಾಂಧಿನಗರ, ದಾವಣಗೆರೆ ತಾಲ್ಲೂಕು, ಮತ್ತು ಜಿಲ್ಲೆ. **ವಿರುದ್ಧ**
**ಎದುರುದಾರರು :** ಯಾರೂ ಇಲ್ಲ.

**ಸಾರ್ವಜನಿಕ ಪ್ರಕಟಣೆ**

ಈ ಮೇಲ್ಕಂಡ ಪ್ರಕರಣದಲ್ಲಿ ಚನ್ನಗಿರಿ ತಾಲ್ಲೂಕು, ಯಕ್ಕೆಗೊಂದಿ ಗ್ರಾಮದ ಹಳೆ ರಿ.ಸ.ನಂ. 66/ಎ, ಹೊಸ ಸ.ನಂ. 66/2 ರ 2 ಎಕರೆಯ ಪೈಕಿ 1 ಎಕರೆ ಜಮೀನಿಗೆ ಸಂಬಂಧಿಸಿದಂತೆ ತೋಪಣ್ಣ ಬಿನ್ ಪಾನಪಟ್ಲಪ್ಪನವರು ಅರ್ಜಿದಾರರಿಗೆ ಚನ್ನಗಿರಿ ಸಬ್ ರಿಜಿಸ್ಟರ್‌ನ 3 ಬುಕ್, 29 ವ್ಯಾಲ್ಯೂಮ್, 173- 175 ನೇ ಪೇಜ್, 22/2001-02 ರಂತೆ ವಿಲ್ ಯಾನೆ ಮರಣ ಶಾಸನ ಪತ್ರ ಬರೆದುಕೊಟ್ಟಿದ್ದು, ಅದರನ್ವಯ ಅರ್ಜಿದಾರರು ಪ್ರೊಬೇಟ್ ಆದೇಶ ಪಡೆಯಲು ಮೇಲ್ಕಂಡ ಪ್ರಕರಣವನ್ನು ಸಲ್ಲಿಸಿರುತ್ತಾರೆ. ಈ ಸಂಬಂಧ ಯಾರಿಗಾದರೂ ಯಾವುದೇ ಆಕ್ಷೇಪಣೆಗಳು ಇದ್ದಲ್ಲಿ ಮೇಲ್ಕಂಡ ನ್ಯಾಯಾಲಯದಲ್ಲಿ ದಿನಾಂಕ : 20.11.2023 ರಂದು ಬೆಳಿಗ್ಗೆ 11-00 ಗಂಟೆಗೆ ಸರಿಯಾಗಿ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ಆಕ್ಷೇಪಣೆಗಳು ಇದ್ದಲ್ಲಿ ಸಲ್ಲಿಸುವಂತೆ, ಒಂದೊಮ್ಮೆ ಯಾವುದೇ ರೀತಿಯ ಆಕ್ಷೇಪಣೆ ಸಲ್ಲಿಸದೇ ಇದ್ದಲ್ಲಿ ಯಾವುದೇ ರೀತಿಯ ಆಕ್ಷೇಪಣೆ ಇಲ್ಲವೆಂದು ಮೇಲ್ಕಂಡ ಘನ ನ್ಯಾಯಾಲಯವು ಏಕಪಕ್ಷೀಯ ತೀರ್ಮಾನವನ್ನು ನೀಡುತ್ತೆಂದು ತಿಳಿಸಲಾಗಿದೆ. ದಿನಾಂಕ 02.11.2023ರಂದು ಆದೇಶ ನೀಡಲಾಗಿದೆ.

**ಷೆಡ್ಯೂಲ್ :** ಚನ್ನಗಿರಿ ತಾಲ್ಲೂಕು, ಯಕ್ಕೆಗೊಂದಿ ಗ್ರಾಮದ ಹಳೆ ರಿ.ಸ.ನಂ. 66/ಎ, ಹೊಸ ಸ.ನಂ. 66/2 ರ 2 ಎಕರೆಯ ಪೈಕಿ ಪೂರ್ವದ ದಿಕ್ಕಿನ 1 ಎಕರೆ ಜಮೀನಿಗೆ ಚಕ್ಕುಬಂದಿ. ಪೂರ್ವ : ಗಂಗಮ್ಮ ಜಮೀನು, ಪಶ್ಚಿಮಕ್ಕೆ : ಸದರಿ ಸ.ನಂ.ನ ಉಳಿದ ಜಮೀನು. ಉತ್ತರಕ್ಕೆ : ಚಾನಲ್, ದಕ್ಷಿಣಕ್ಕೆ : ರುದ್ರಪ್ಪನ ಜಮೀನು.

ಅರ್ಜಿದಾರರ ಪರ ವಕೀಲರು
**ಶ್ರೀ ವಿನಾಯಕ ಹೆಚ್.** ವಕೀಲರು,
#19, ಬಸಪ್ಪ ನಿಲಯ, ದೇವರಾಜ್ ಅರಸು ಸೊಸೈಟಿ ಹತ್ತಿರ, ಲೆನಿನ್ ನಗರ, ದಾವಣಗೆರೆ.
**ಮೊ. ನಂ. 99729 87588**
ದಾವಣಗೆರೆ
ದಿನಾಂಕ

**ನ್ಯಾಯಾಲಯದ ಅಪ್ಪಣೆಯ ಮೇರೆಗೆ**
ಮುಖ್ಯ ಆಡಳಿತಾಧಿಕಾರಿಗಳು,
ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದಾವಣಗೆರೆ.

# ಛತ್ತೀಸ್‌ಘಡ ಚುನಾವಣೆಯಲ್ಲಿ 'ಗ್ಯಾರಂಟಿ' ಹಾದಿ ಹಿಡಿದ ಬಿಜೆಪಿ

ರಾಯಪುರ, ನ. 3 – ಛತ್ತೀಸ್‌ಘಡ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸಹ 'ಗ್ಯಾರಂಟಿ' ಹಾದಿ ಹಿಡಿದಿದೆ. ವಿವಾಹಿತ ಮಹಿಳೆಯರು ಹಾಗೂ ಭೂ ರಹಿತ ಕಾರ್ಮಿಕರಿಗೆ ವಾರ್ಷಿಕ ಹಣ, ಕ್ವಿಂಟಾಲ್‌ಗೆ 3,100 ರೂ. ದರದಲ್ಲಿ ಭತ್ತ ಖರೀದಿ ಹಾಗೂ ಬಡ ಕುಟುಂಬಗಳಿಗೆ 500 ರೂ. ದರದಲ್ಲಿ ಸಿಲಿಂಡರ್ ಪೂರೈಕೆ ಸೇರಿದಂತೆ ಹಲವಾರು ಕೊಡುಗೆಗಳನ್ನು ನೀಡುವುದಾಗಿ ಪಕ್ಷ ಭರವಸೆ ನೀಡಿದೆ.

**ವಿವಾಹಿತ ಮಹಿಳೆಯರು, ಭೂ ರಹಿತ ಕಾರ್ಮಿಕರಿಗೆ ವಾರ್ಷಿಕ ಹಣದ ಭರವಸೆ**

ಎರಡು ವರ್ಷಗಳಲ್ಲಿ ಛತ್ತೀಸ್‌ಘಡ ಸರ್ಕಾರದಲ್ಲಿ ಖಾಲಿ ಇರುವ ಲಕ್ಷ ಹುದ್ದೆಗಳನ್ನು ತುಂಬಲಾಗುವುದು, ಅಯೋಧ್ಯೆಯ ರಾಮ ದೇವಾಲಯಕ್ಕೆ ಜನರನ್ನು ಕಳಿಸಲು ವ್ಯವಸ್ಥೆ ಮಾಡಲಾಗುವುದು ಎಂದೂ ಪಕ್ಷ ಭರವಸೆ ನೀಡಿದೆ. ಮಹಿಳೆಯರಿಗೆ ಪ್ರತಿ ವರ್ಷ 12 ಸಾವಿರ ರೂ. ಹಾಗೂ ಭೂ ರಹಿತ ಕೃಷಿ ಕಾರ್ಮಿಕರಿಗೆ 10 ಸಾವಿರ ರೂ. ನೀಡಲಾಗುವುದು ಎಂದು ಪ್ರಣಾಳಿಕೆಯಲ್ಲಿ ತಿಳಿಸಲಾಗಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಉಚಿತ ಕೊಡುಗೆ ನೀಡುವುದನ್ನು 'ರೇವಡಿ' ಎಂದು ಲೇವಡಿ ಮಾಡಿದ್ದರು. ಆದರೆ, ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಐದು ಗ್ಯಾರಂಟಿಗಳನ್ನು ಪ್ರಮುಖವಾಗಿ ಬಿಂಬಿಸಿ ಗೆಲುವು ಸಾಧಿಸಿತ್ತು. ಪ್ರಸಕ್ತ ನಡೆಯುತ್ತಿರುವ ಪಂಚ ರಾಜ್ಯಗಳ ಚುನಾವಣೆಯಲ್ಲೂ ಕಾಂಗ್ರೆಸ್ ಹಲವಾರು ಕೊಡುಗೆಗಳನ್ನು ಪ್ರಕಟಿಸಿದೆ.

## ಸಂಸದ ಸಿದ್ದೇಶ್ವರರ ಇಂದಿನ ಕಾರ್ಯಕ್ರಮ

ಸಂಸದರ ಪ್ರದೇಶಾಭಿವೃದ್ಧಿ ಯೋಜನೆಯ ಸ್ಮಾರ್ಟ್ ಸಿಟಿ ಯೋಜನೆ ಹಾಗೂ ಜಲ ಸಿರಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯು ಇಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ನಡೆಯಲಿದ್ದು, ಈ ಸಭೆಯಲ್ಲಿ ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ಭಾಗವಹಿಸುವರು.

# ಮಾನವ ಕುಲ ಬದುಕಿನ ಮರ್ಮ ಅರಿತು ಮುನ್ನಡೆಯಬೇಕು

## ಹೊನ್ನಾಳಿ : 'ಶರಣರು ಕಂಡ ಶಿವ' ಪ್ರವಚನದ ಉದ್ಘಾಟನೆಯಲ್ಲಿ ಹಿರೇಕಲ್ಮಠದ ಶ್ರೀಗಳ ಹಿತನುಡಿ



ಹೊನ್ನಾಳಿ, ನ.3- ಮಾನವನನ್ನು ಮಹಾದೇವನನ್ನಾಗಿಸುವ ಪ್ರಯತ್ನವಾಗಿ 'ಶರಣರು ಕಂಡ ಶಿವ' ಪ್ರವಚನ ಮಾಲೆಯನ್ನು ಆಯೋಜಿಸ ಲಾಗಿದ್ದು, ಎಲ್ಲರೂ ಈ ಕಾರ್ಯಕ್ರಮದ ಸದ್ಬಳಕೆ ಮಾಡಿಕೊಳ್ಳಬೇಕಾಗಿ ಈಶ್ವರೀಯ ವಿಶ್ವವಿದ್ಯಾಲಯದ ಹುಬ್ಬಳ್ಳಿ ವಲಯ ನಿರ್ದೇಶಕ ರಾಜಯೋಗಿ ಬ್ರಹ್ಮಾಕುಮಾರ ಡಾ. ಬಸವರಾಜ ರಾಜಋಷಿ ಕರೆ ನೀಡಿದರು.

ಪಟ್ಟಣದ ಮಾರಿಕೊಪ್ಪ ರಸ್ತೆಯಲ್ಲಿರುವ ಮೈದಾನದಲ್ಲಿ ಹೊನ್ನಾಳಿಯ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿದ್ಯಾಲಯದಿಂದ ನಿನ್ನೆ ಆಯೋಜಿಸಿದ್ದ 'ಶರಣರು ಕಂಡ ಶಿವ ಪ್ರವಚನ ಮಾಲೆ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಉಪನ್ಯಾಸ ನೀಡಿದರು.

ಸಕಲ ಜೀವಾತ್ಮಗಳಿಗೂ ಲೇಸನ್ನೇ ಬಯಸುವ ಶರಣರಿಗೆ ಜಾತಿ ಹಾಗೂ ಪಂಗಡಗಳ ಸೂತಕ ಇಲ್ಲ. ಶರಣರು ಆಚಾರ-ವಿಚಾರಗಳನ್ನು ಚಿಂತಿಸುವ ಸಂತ ಶ್ರೇಷ್ಠರು. ಶರಣರು ನುಡಿದಂತೆ ನಡೆದು, ನಡೆದಂತೆ ನುಡಿಯುವ ಶರಣರು. ಇಂದಿಗೂ ಎಲ್ಲರಿಗೂ ಮೇಲ್ಪಂಕಿ ಹಾಕಿಕೊಟ್ಟು ಆದರ್ಶ ಮೆರೆದಿದ್ದಾರೆ. ಇಂತಹ ಅನುಯಾಯಿಯಾಗಿ ಇದೊಂದು ದೇವತಾ ಕಾಯಕ ಎಂದು ತನ್ನನ್ನು ತಾನು ಅರಿತುಕೊಂಡು ಸನ್ಮಾರ್ಗದಲ್ಲಿ ನಡೆಯಬೇಕು ಎಂದು ತಿಳಿಸಿದರು.

ತಾನು ಮಾಡಿದ ಪಾಪ, ಪುಣ್ಯದ ಆಧಾರದ ಮೇಲೆ ನಮ್ಮ ಪುನರ್ ಜನ್ಮ ನಿರ್ಧಾರವಾಗುತ್ತದೆ. ಶರೀರದಲ್ಲಿ ಆತ್ಮ ಇದ್ದಾಗ ಮಾತ್ರ ಬೆಲೆ, ಇಲ್ಲದಿದ್ದರೆ ಶರೀರವನ್ನು ಹೆಸರಿನಿಂದ ಕರೆಯುವುದಿಲ್ಲ ಬದಲಾಗಿ ಮೃತ ಶರೀರ ಎಂದು ಕರೆಯುತ್ತಾರೆ.ಆದ್ದರಿಂದ ಬದುಕಿರುವ ದಿನಗಳಲ್ಲಿ ನಾವು ಇತರರಿಗೆ ಒಳ್ಳೆಯದನ್ನೇ ಮಾಡಿ ಪುಣ್ಯವನ್ನು ಸಂಪಾದಿಸೋಣ ಎಂದರು.

ಶಿವನು ಅಜನ್ಮ, ಅಯೋನಿಜ, ಅವ್ಯಕ್ತ, ಅಮರ, ಅವಿನಾಶ ಹಾಗೂ ಸರ್ವಶಕ್ತಿವಂತನಾಗಿದ್ದಾನೆ. ಶಿವನ ಮಹಿಮೆಯನ್ನು ಶಿವಶರಣರ ವಚನ ಸಾಹಿತ್ಯದಲ್ಲಿ ಅಪಾರವಾಗಿ ಪರಿಚಯಿಸಲಾಗಿದೆ. ವಿಶೇಷವಾಗಿ ಬಸವಣ್ಣನವರ ವಚನಗಳಲ್ಲಿ ಶಿವನನ್ನು ಬಹು ಸುಂದರವಾಗಿ ಪರಿಚಯಿಸಲಾಗಿದೆ ಎಂದು ದೃಷ್ಟಾಂತಗಳ ಮೂಲಕ ವಿವರಿಸಿದರು.

ಹಿರೇಕಲ್ಮಠದ ಶ್ರೀ ಡಾ. ಒಡೆಯರ್ ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಶ್ರೀಗಳು ಆಶೀರ್ವಚನ ನೀಡಿ, ಇಡೀ ಮಾನವಕುಲ ತಮ್ಮ ಬದುಕಿನ ಮರ್ಮವನ್ನು ಅರಿತುಕೊಂಡು ಮುನ್ನಡೆಯುವುದು ಅತ್ಯವಶ್ಯಕವಾಗಿದೆ. ಶರಣರು ಹೇಳಿದ್ದನ್ನು ಕೇಳುತ್ತೇವೆ, ಆದರೆ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದಿಲ್ಲ. ಹಾಗಾಗಿ ನಾವು ಇಂದಿಗೂ ಮನುಷ್ಯರಾಗಿದ್ದೇವೆ ಹೊರತು ಮಹಾದೇವರಾಗಿಲ್ಲ ಎಂದು ತಿಳಿಸಿದರು.

ಶರಣರ ತತ್ವಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಶಾಸಕ ಡಿ.ಜಿ.ಶಾಂತನಗೌಡ ಮಾತನಾಡಿ, ಜೀವನದಲ್ಲಿ ಶಾಂತಿ-ನೆಮ್ಮದಿಯಿಂದ ಸೌಹಾರ್ದ ಜೀವನ ನಡೆಸಬೇಕೆಂದು ಕಿವಿಮಾತು ಹೇಳಿದರು.

ಪುರಸಭೆ ಅಧ್ಯಕ್ಷರಾದ ಸುಮಾ ಮಂಜುನಾಥ್ ಇಂಚರ, ಮಾರುತಿ ರೈಸ್ ಮಿಲ್ ಮಾಲೀಕ ಎಚ್.ಎ. ಉಮಾಪತಿ, ತಾಲ್ಲೂಕು ವೈದ್ಯಾಧಿಕಾರಿ ಡಾ.ಕೆಂಚಪ್ಪ ಆರ್. ಬಂತಿ, ಓಂ ಗಣೇಶ್ ಟ್ರ್ಯಾಕ್ಟರ್ ಮಾಲೀಕ ಹರ್ಷ ಕಾಮತ್, ಇನ್‌ಸೈಟ್ಸ್ ಐಎಎಸ್ ಸಂಸ್ಥೆ ಸಂಸ್ಥಾಪಕ ವಿನಯ್‌ಕುಮಾರ್, ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ಮಹೇಶ್ವರಪ್ಪ ಮತ್ತಿತರರು ಉಪಸ್ಥಿತರಿದ್ದರು.

ಈಶ್ವರೀಯ ವಿಶ್ವವಿದ್ಯಾಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ಜ್ಯೋತಿ ಅವರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

# ಆರೋಗ್ಯಕರ ಜೀವನ ಶೈಲಿ, ಪಥ್ಯದಿಂದ 14 ದಿನಗಳಲ್ಲೇ ಸಕ್ಕರೆ ಅಂಶ ನಿಯಂತ್ರಣ

**ಪಾಟ್ನಾ ಆಯುರ್ವೇದ ಕಾಲೇಜಿನ ಅಧ್ಯಯನ ವರದಿ**

ನವದೆಹಲಿ, ನ. 3 - ಆರೋಗ್ಯಕರ ಜೀವನ ಶೈಲಿ ಹಾಗೂ ಪಥ್ಯದಿಂದ ಸಕ್ಕರೆ ಕಾಯಿಲೆ ಎದುರಿಸುತ್ತಿರುವವರ ರಕ್ತದಲ್ಲಿನ ಸಕ್ಕರೆ ಪ್ರಮಾಣವನ್ನು 14 ದಿನಗಳಲ್ಲೇ ಕಡಿಮೆ ಮಾಡಬಹುದು ಎಂದು ಇತ್ತೀಚಿನ ಅಧ್ಯಯನವೊಂದು ತಿಳಿಸಿದೆ.

ಪಾಟ್ನಾದ ಸರ್ಕಾರಿ ಆಯುರ್ವೇದ ಕಾಲೇಜು ಹಾಗೂ ಆಸ್ಪತ್ರೆಯ ತಂಡ ಈ ಅಧ್ಯಯನ ನಡೆಸಿದೆ. ಕಾಲೇಜು ನಡೆ ಸಿದ ಅಧ್ಯಯನ ವಿವರಗಳನ್ನು ಇಂಟರ್‌ನ್ಯಾಷನಲ್ ಆಯುರ್ವೇದಿಕ್ ಮೆಡಿಕಲ್ ಜರ್ನಲ್ ನಿಯತಕಾಲಿಕದಲ್ಲಿ ಪ್ರಕಟಿಸಲಾಗಿದೆ.

ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಪ್ರಭಾಸ್ ಚಂದ್ರ ಪಾಠಕ್ ಅವರ ನೇತೃತ್ವದ ತಂಡ ಅಧ್ಯಯನ ನಡೆಸಿದೆ.

ಸಕ್ಕರೆ ಕಾಯಿಲೆ ಎದುರಿಸುತ್ತಿರುವವರಿಗೆ ಬಿಜಿಆರ್-34, ಆರೋಗ್ಯವರ್ಧನಿ ವಾಟಿ, ಚಂದ್ರಪ್ರಭಾ ವಟಿ, ಕೊಲೆಸ್ಟ್ರಾಲ್ ತಗ್ಗಿಸುವ ಔಷಧಿ, ಜೀವನ ಶೈಲಿ ಬದಲಾವಣೆ ಹಾಗೂ ನಿರ್ದಿಷ್ಟ ಪಥ್ಯವನ್ನು ಎರಡು ವಾರಗಳವರೆಗೆ ನೀಡಲಾಗಿತ್ತು.

ಎರಡು ವಾರಗಳ ನಂತರ ಚಿಕಿತ್ಸೆಯನ್ನು ಸ್ವಲ್ಪ ಬದಲಿಸಲಾಗಿತ್ತು. ಈ ಅವಧಿಯಲ್ಲಿ ಸಕ್ಕರೆ ಕಾಯಿಲೆಯವರಲ್ಲಿ ಗಮನೀಯ ಬದಲಾವಣೆ ಕಂಡು ಬಂದಿದೆ. 254 ಎಂಜಿ/ಡಿಎಲ್ ಸಕ್ಕರೆ ಪ್ರಮಾಣ 124 ಎಂಜಿ/ಡಿಎಲ್‌ಗೆ ಇಳಿದಿದೆ.

ಬಿಜಿಆರ್-34 ಔಷಧಿಯಲ್ಲಿ ಸಕ್ಕರೆ ಕಾಯಿಲೆ ವಿರೋಧಿಯಾದ ದರುಹರಿದ್ರ, ಗಿಲ್ಯೆ, ವಿಜಯಸಾರ, ಗುಡ್ಮಾರ್, ಮೇಥಿ ಹಾಗೂ ಮಂಜಿಷ್ಠಗಳಿವೆ. ಈ ಔಷಧಿಯನ್ನು ದೇಶದ ಪ್ರಮುಖ ಸಂಶೋಧನಾ ಸಂಸ್ಥೆ ಸಿ.ಎಸ್.ಐ.ಆರ್. ರೂಪಿಸಿದೆ.

ಸಕ್ಕರೆ ಕಾಯಿಲೆಯವರು ಜೀವನವಿಡೀ ಔಷಧಗಳನ್ನು ಅವಲಂಬಿಸಬೇಕಾಗುತ್ತದೆ. ಹೀಗಾಗಿ ಈ ಅಧ್ಯಯನ ಉಪಯುಕ್ತವಾಗಿದೆ ಎಂದು ಐಮಿಲ್ ಫಾರ್ಮಾಸೂಟಿಕಲ್ಸ್ ಕಾರ್ಯಕಾರಿ ನಿರ್ದೇಶಕ ಡಾ. ಸಚಿನ್ ಶರ್ಮ ಹೇಳಿದ್ದಾರೆ.

ಗಿಡ ಮೂಲಿಕೆಗಳಲ್ಲಿ ಆಂಟಿ - ಆಕ್ಸಿಡೆಂಟ್ ಮಟ್ಟ ಹೆಚ್ಚಾಗಿರುವುದರಿಂದ ಅವು ರೋಗ ನಿರೋಧಕತೆಯನ್ನೂ ಹೆಚ್ಚಿಸುತ್ತವೆ ಎಂದು ಶರ್ಮ ಹೇಳಿದ್ದಾರೆ.

ಈ ಅಧ್ಯಯನದ ವೇಳೆ ರೋಗಿಗಳು ಪ್ರತಿನಿತ್ಯ ಒಂದು ಗಂಟೆ ಕಾಲ್ನಡಿಗೆ ಮಾಡಬೇಕು ಎಂದೂ ತಿಳಿಸಲಾಗಿತ್ತು.

# ಆಕಾಶವಾಣಿಯಲ್ಲಿ ಹೊರನಾಡ ಕನ್ನಡಿಗರ ಕನ್ನಡ ಪ್ರೀತಿ

ದಾವಣಗೆರೆ, ನ.2- ಆಕಾಶವಾಣಿ ಭದ್ರಾವತಿಯಿಂದ ನವೆಂಬರ್ ತಿಂಗಳ ಪ್ರತಿದಿನ ಬೆಳಿಗ್ಗೆ 9.35 ಗಂಟೆಗೆ 'ಹೊರನಾಡ ಕನ್ನಡಿಗರ ಕನ್ನಡ ಪ್ರೀತಿ' ಕಾರ್ಯಕ್ರಮ ಸರಣಿಯನ್ನು ಆಕಾಶವಾಣಿ ಭದ್ರಾವತಿ FM103.5 ಹಾಗೂ MW 675Khz ಯಲ್ಲಿ ಪ್ರಸಾರವಾಗಲಿದೆ. ದಾವಣಗೆರೆ, ಶಿವಮೊಗ್ಗ ಮತ್ತು ಚಿಕ್ಕಮಗಳೂರು ಜಿಲ್ಲೆಯ ಹೊರನಾಡ ಕನ್ನಡಿಗರು ಭಾಗವಹಿಸಬಹುದಾಗಿದ್ದು, ತಮ್ಮ ಕನ್ನಡ ಪ್ರೀತಿಯ ಅನಿಸಿಕೆಯ ಧ್ವನಿಮುದ್ರಿಸಿ ಇ-ಮೇಲ್ airbdvt@gmail.com ಗೆ ಕಳುಹಿಸಬಹುದು ಎಂದು ಆಕಾಶವಾಣಿ ಭದ್ರಾವತಿ ಕಾರ್ಯಕ್ರಮ ಮುಖ್ಯಸ್ಥ ಎಸ್.ಆರ್ ಭಟ್ ತಿಳಿಸಿದ್ದಾರೆ.




ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ 03-11-2023ರ ಶುಕ್ರವಾರ ಅಕಾಲಿಕವಾಗಿ ನಿಧನರಾದ ಹೆಸರಾಂತ ಲೆಕ್ಕ ಪರಿಶೋಧಕರೂ ಮತ್ತು ತೆರಿಗೆ ಸಲಹೆಗಾರರೂ ಮತ್ತು ನಮ್ಮ ಸಂಘದ ಮಾಜಿ ಅಧ್ಯಕ್ಷರಾಗಿದ್ದ

**ಶ್ರೀ ಪ್ರಮೋದ್ ಪಿ. ಕಲಬುರ್ಗಿ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಮೃತರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು, ಕಾರ್ಯದರ್ಶಿಗಳು ಮತ್ತು ಜಿಲ್ಲೆಯ ಎಲ್ಲಾ ತೆರಿಗೆ ಸಲಹೆಗಾರರು

ದಾವಣಗೆರೆ ಜಿಲ್ಲಾ ತೆರಿಗೆ ಸಲಹೆಗಾರರ ಸಂಘ (ರಿ.) ದಾವಣಗೆರೆ.


# ವಿನೂತನ ಮಹಿಳಾ ಸಮಾಜದಲ್ಲಿ ಸಂಭ್ರಮದ ಕರ್ನಾಟಕ ರಾಜ್ಯೋತ್ಸವ



ದಾವಣಗೆರೆ, ನ. 3- ನಗರದ ವಿನೂತನ ಮಹಿಳಾ ಸಮಾಜದಲ್ಲಿ 68ನೇ ಕನ್ನಡ ರಾಜ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು.

ಕನ್ನಡತನ, ಕನ್ನಡ ಭಾಷೆ ಉಳಿಸುವಲ್ಲಿ ಕನ್ನಡಿಗರ ಪಾತ್ರ ಎಂಬ ವಿಷಯದ ಬಗ್ಗೆ ಜಿಲ್ಲಾ ಮಟ್ಟದ ಪ್ರಬಂಧ ಸ್ಪರ್ಧೆ, ಕರ್ನಾಟಕ ದರ್ಶನ ಎನ್ನುವ ಪರಿಕಲ್ಪನೆಯೊಂದಿಗೆ ಆಂಗ್ಲ ಪದ ಬಳಕೆ ಮಾಡದೇ ಆಶುಭಾಷಣ ಸ್ಪರ್ಧೆ, ದಿನನಿತ್ಯ ಬಳಸುವ ಆಂಗ್ಲ ಪದಗಳನ್ನು ಕನ್ನಡದಲ್ಲಿ ಬರೆಯುವ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಸ್ಪರ್ಧೆಗಳ ತೀರ್ಪುಗಾರರಾಗಿ ಶ್ರೀಮತಿ ಉಷಾ ಬಸವರಾಜ್ ಆಗಮಿಸಿದ್ದರು. ವಿನೂತನ ಮಹಿಳಾ ಸಮಾಜದ ಅಧ್ಯಕ್ಷೆ ಶ್ರೀಮತಿ ಚಂದ್ರಿಕಾ ಮಂಜುನಾಥ್ ಉಪಸ್ಥಿತರಿದ್ದರು.

ಸಿಜಿಕೆ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ ಸತ್ಯಭಾಮ ಮಂಜುನಾಥ ಹಾಗೂ ಜಿಲ್ಲಾಡಳಿತದ ವತಿಯಿಂದ ಕೊಡಮಾಡುವ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಶ್ರೀಮತಿ ವಿಜಯ ಸಿ. ಅಕ್ಕಿ ಅವರನ್ನು ಗೌರವಿಸಲಾಯಿತು. ಭುವನೇಶ್ವರಿ ಸ್ವಾಗತಿಸಿದರು. ಸುಧಾ ಅತಿಥಿಗಳನ್ನು ಪರಿಚಿಸಿದರು. ಇಂದಿರಾ ಆಶು ಭಾಷಣ ಸ್ಪರ್ಧೆ ನಡೆಸಿಕೊಟ್ಟರು. ಲತಾ ಫಲಿತಾಂಶದ ವಿವರ ಹೇಳಿದರು. ಸುಕನ್ಯಾ ವಂದಿಸಿದರು. ರತ್ನ ಗೌರವ ಸಮರ್ಪಣೆ ಮಾಡಿದರು. ಹೇಮಾ ಕಾರ್ಯಕ್ರಮ ನಿರೂಪಿಸಿದರು.

## ಪಂಜಾಬ್ ನ್ಯಾಷನಲ್ ಬ್ಯಾಂಕ್, ಫೆಡರಲ್ ಬ್ಯಾಂಕ್‌ಗಳಿಗೆ ದಂಡ

ಮುಂಬೈ, ನ. 3 – ಕೆಲ ನಿಯಮಗಳನ್ನು ಪಾಲಿಸದ ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗೆ 72 ಲಕ್ಷ ರೂ. ಹಾಗೂ ಫೆಡರಲ್ ಬ್ಯಾಂಕ್‌ಗೆ 30 ಲಕ್ಷ ರೂ.ಗಳ ದಂಡ ವಿಧಿಸಿರುವುದಾಗಿ ರಿಸರ್ವ್ ಬ್ಯಾಂಕ್ ಹೇಳಿದೆ. ಮರ್ಸಿಡಿಸ್ ಬೆಂಜ್ ಫೈನಾನ್ಶಿಯಲ್ ಸರ್ವೀಸಸ್ ಇಂಡಿಯಾ ಸಂಸ್ಥೆಗೆ 10 ಲಕ್ಷ ರೂ.ಗಳ ದಂಡ ವಿಧಿಸಲಾಗಿದೆ.

## ನೇಪಾಳದಲ್ಲಿ ಭೂಕಂಪ, ನಡುಗಿದ ದೆಹಲಿ

ನವದೆಹಲಿ, ನ. 3 – ನೇಪಾಳದಲ್ಲಿ ಶುಕ್ರವಾರ ರಿಕ್ಟರ್ ಮಾಪಕದಲ್ಲಿ 6.4ರಷ್ಟಿದ್ದ ಭೂಕಂಪ ಸಂಭವಿಸಿದೆ. ಭೂಕಂಪದ ಕಾರಣದಿಂದ ದೆಹಲಿ ಹಾಗೂ ಸುತ್ತಲಿನ ಪ್ರದೇಶಗಳಲ್ಲೂ ನೆಲ ನಡುಗಿದೆ.

ಶುಕ್ರವಾರ ರಾತ್ರಿ 11.32ರ ಸಮಯದಲ್ಲಿ ನೇಪಾಳದಲ್ಲಿ ಭೂಕಂಪ ಸಂಭವಿಸಿದೆ. ಭೂಕಂಪ ನೆಲದಿಂದ 10 ಕಿ.ಮೀ. ಆಳದಲ್ಲಿ ಕೇಂದ್ರೀಕೃತವಾಗಿತ್ತು. ನೇಪಾಳದಲ್ಲಿ ತಿಂಗಳಲ್ಲಿ 3ನೇ ಬಾರಿ ಭೂಕಂಪ ಸಂಭವಿಸಿದೆ. ಈ ಹಿಂದೆ ಅಕ್ಟೋಬರ್ 22 ಹಾಗೂ ಅಕ್ಟೋಬರ್ 3ರಂದು ಭೂಕಂಪ ಸಂಭವಿಸಿತ್ತು.

## ಬನ್ನಿಮಹಾಂಕಾಳಿದೇವಿ ದೇವಸ್ಥಾನದಲ್ಲಿ ಇಂದು ಅಭಿಷೇಕ

ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 1ನೇ ಅಡ್ಡ ರಸ್ತೆಯಲ್ಲಿರುವ ಶ್ರೀ ಬನ್ನಿ ಮಹಾಂಕಾಳಿ ದೇವಸ್ಥಾನದ 19ನೇ ವಾರ್ಷಿಕೋತ್ಸವದ ಅಂಗವಾಗಿ ಇಂದು ಶ್ರೀ ಬನ್ನಿ ಮಹಾಂಕಾಳಿ ದೇವಿಗೆ ಅಭಿಷೇಕ, ಮಹಾಪೂಜೆ ನಡೆಯಲಿವೆ. ಬೆಳಿಗ್ಗೆ 6 ಗಂಟೆಗೆ ಅಭಿಷೇಕ, ಮಧ್ಯಾಹ್ನ 12 ಅನ್ನ ಸಂತರ್ಪಣೆ ನಡೆಯಲಿದೆ.


ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘ (ರಿ)

ದಾವಣಗೆರೆ ನಗರಕ್ಕೆ ಆಗಮಿಸುತ್ತಿರುವ



ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಕಾರ್ಮಿಕ ಸಚಿವರು ಮತ್ತು ಸಮಾಜದ ಮುಖಂಡರು ಆದ

ಸನ್ಮಾನ್ಯ ಶ್ರೀ ಸಂತೋಷ್ ಲಾಡ್ ರವರಿಗೆ

ಸನ್ಮಾನ ಸಮಾರಂಭ

ದಿನಾಂಕ: 04.11.2023 ರ ಶನಿವಾರ ಸಂಜೆ : 6.00 ಗಂಟೆಗೆ

ಸ್ಥಳ : ಶ್ರೀ ಕೃಷ್ಣ ಭವಾನಿ ಕಲ್ಯಾಣ ಮಂಟಪ, 'ಸಿ' ಬ್ಲಾಕ್, ದೇವರಾಜ ಅರಸ್ ಬಡಾವಣೆ, ದಾವಣಗೆರೆ.

ತಾವೆಲ್ಲರೂ ತಮ್ಮ ಆತ್ಮೀಯರೊಂದಿಗೆ ಸಮಾರಂಭಕ್ಕೆ ಆಗಮಿಸಲು ಈ ಮೂಲಕ ಆಹ್ವಾನಿಸುತ್ತಿದ್ದೇವೆ.

ಕ್ಷತ್ರಿಯ ಮರಾಠ ವಿದ್ಯಾವರ್ಧಕ ಸಂಘ (ರಿ) ದಾವಣಗೆರೆ

ಗೌರವ ಅಧ್ಯಕ್ಷರು ಶ್ರೀ ಯಶವಂತರಾವ್ ಜಾಧವ್ | ಅಧ್ಯಕ್ಷರು ಶ್ರೀ ಡಿ. ಮಾಲತೇಶ್ ರಾವ್ ಜಾಧವ್





Celebrate DIWALI In style!

Discover the Grand Diwali Collection's at MERAKI'S BOUTIQUE

Explore our curated range of Trending collection this Diwali

Address
Merakis Boutique Vidyanagar,4th Main Road, Opp UBDT Girls Hostel, Davangere.
Contact: 9742535932

HAPPY DIWALI



ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 03-11-2023ರ ಶುಕ್ರವಾರ ನಿಧನರಾದ ಅಕ್ಕಿ ವರ್ತಕರೂ, ನಮ್ಮ ಒಡನಾಡಿಗಳೂ ಆಗಿದ್ದ

**ಶ್ರೀ ಯರಗುಂಟೆ ಮಂಜಣ್ಣ (ಸೊಸೈಟಿ ಮಂಜಣ್ಣ)**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಮೃತರ ಕುಟುಂಬ ವರ್ಗಕ್ಕೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

- ಬಿ.ಎಂ. ಕಡೇಕೊಪ್ಪ, ರಾಜಶೇಖರ್ ಕಡೇಕೊಪ್ಪ, ದಾವಣಗೆರೆ.
- ಎನ್.ಎಂ. ಕಡೇಕೊಪ್ಪ ಮತ್ತು ಮಕ್ಕಳು, ದಾವಣಗೆರೆ.
- ನಾಗಭೂಷಣ್ ಕಡೇಕೊಪ್ಪ, ವರ್ತಕರು, ದಾವಣಗೆರೆ
- ನಂದಿಗಾವಿ ಟ್ರೇಡರ್ಸ್, ರಾಜಣ್ಣ (Z), ವರ್ತಕರು, ದಾವಣಗೆರೆ.
- ಶಿವಾನಂದ ಪಲ್ಲಾಗಟ್ಟಿ (SKP), ದಾವಣಗೆರೆ.
- ಡಿ. ಡಿ. ಬಸಣ್ಣ, ವರ್ತಕರು, ದಾವಣಗೆರೆ.
- ಸಿದ್ದರಾಜು, ಟಿ.ಕೆ. ಚನ್ನಬಸಪ್ಪ, ತ್ಯಾವಣಿಗೆ.